ನನಿಶ್ಚಿತಾರ್ಥಾತ್ ವಿರಮಂತಿ ಧೀರಾಃ



ರ್ಷಿಕ ಚಂದಾ ರೂ. ೩] ಉಡುಪಿ, ದ. ಭಾರತ. ಬಿಡಿ ಸಂಚಿಕೆ 25 ನ. ಪೈಸೆ.

ಪುಟ ಗಳ] **MAY 1962** ವೈಶಾಖ [ಸಂಚಿಕೆ ೮

–: ವಿಷಯ ಸೂಚಿ :–

ಸಂಪಾದಕೀಯ

ಯೋಗ ರತ್ನಾವಳಿ (ಕಳೆದ ಸಂಚಿಕೆಯಿಂದ)

ವಸಂತ ರೋಗ–ಸಿಡುಬು ಮತ್ತು ಅದರ ಚಿಕಿತ್ಸೆ (ಆಯುರ್ಮಿತ್ರ ಹಿಂದಿಯಿಂದ)


ಆಯುರ್ವೇದ ಪರಿಷತ್ತುಗಳು.

ಕೀಟಾಣು (ಮರಾಠಿ "ಆಯುರ್ವೇದದಿಂದ")

ಅನುಭವಿಕ ಪ್ರಯೋಗಗಳು

ಸಾಪನ ಸ್ವಿಕಾರ, ಇತ್ಯಾದಿತ್ಯಾದಿ.

A Y U R V E D A



ಮಹಾಪರಾಧ !

ಬೇರೆ ಎಂದಿಗೂ ಅಲ್ಲ, ಆದರೆ ಇಂತಹ ಸಮಯದಲ್ಲಿ


ಕೆಮ್ಮುವುದು ನಿಶ್ಚಯವಾಗಿಯೂ ಮಹಾಪರಾಧವಾಗಿವೆ.

ತೊಂದರೆ ಕೊಡುವ ಕೆಮ್ಮನ್ನು ನಿಲ್ಲಿಸಲಿಕ್ಕೆ ಕಾಸ್ಫೋ ಸೇವಿಸುವುದು ಯೋಗ್ಯವಾಗಿರುತ್ತದೆ. ಕೆಮ್ಮು, ನೆಗಡಿ ಹಾಗೂ ಗಂಟಲಿನ ಮತ್ತು ಎದೆಯ ಎಲ್ಲಾ ಕಷ್ಟಗಳಿಂದ ಪಾರಾಗಲಿಕ್ಕೆ ಕಾಸ್ಫೋವಿನ ಒಂದು ಸೀಸೆಯನ್ನು ನಿಮ್ಮ ಹತ್ತಿರ ಇಟ್ಟುಕೊಳ್ಳಿರಿ.

ಕಾಸ್ಫೋ

ಕೆಮ್ಮನ್ನು ಗುಣಪಡಿಸುವ ಮಾತ್ರೆಗಳು

ತಯಾರಿಸುವವರು:-
ಆಯುರ್ವೇದಾಶ್ರಮ ಫಾರ್ಮಸಿ ಲಿ.,
ಅಹಮದ್‌ನಗರ್.



—: ಸಾದರ ಸ್ವೀಕಾರ :—

ಎಲ್ಲೂರು ಪಂಚಾಂಗ

ಸುಜ್ಞಾನಾಮೃತ ಕಾರ್ಯಾಲಯ, ಎಲ್ಲೂರು (ದ. ಕನ್ನಡ) ಇವರ ಶುಭಕೃತು ಸಂವತ್ಸರದ ಪಂಚಾಂಗವು ಬಹಳ ವರ್ಷಗಳಿಂದಲೂ ಪ್ರಖ್ಯಾತವಿರುವುದರಿಂದ ಇದರ ವಿಮರ್ಶೆ ಅಗತ್ಯವಿಲ್ಲ. ಇದರ ವೈಶಿಷ್ಟ್ಯವೆಂದರೆ ವೈದ್ಯಕದ ವಿಚಾರದಲ್ಲಿಯೂ ಇದರಲ್ಲಿ ಗಣನೆ ಕೊಟ್ಟು ಮಾಹಿತಿಗಳನ್ನು ಒದಗಿಸಿದುದು ಮುಖ್ಯವಾಗಿ ಸ್ವಾಗತಾರ್ಹ.

105 ವರ್ಷಗಳ ಕೆಲೆಂಡರು ಈ ಪಂಚಾಂಗದಲ್ಲಿ ಕೊಟ್ಟಿರುವರು.

ಇದರ ಬೆಲೆ ಕೇವಲ 0–50 ನ.ಪೈಸೆ ಮಾತ್ರ.

आर्थिक सहयोग

ಪ್ರಕಾಶಕರು:— ನೇಶನಲ್ ಅಕಾಡಮಿ, 6 ಅನ್ಸಾರಿ ಮಾರ್ಕೆಟ್, ದರಿಯಾಗಂಜ, ದಿಲ್ಲಿ-1. ಮೂಲ ಲೇಖಕರು:—ಬಿ. ಜೆ. ಪಿ. ಬೂಟ್ಸ್. ಅನುವಾದಕರು (ಹಿಂದಿ):—ಸರ್ವೇಶ್ವರ ದಯಾಲ ಸಕ್ಸೇನಾ.

ಪಾಶ್ಚಿಮಾತ್ಯ ಆರ್ಥಿಕತೆಯ ತಿಳುವಳಿಕೆ, ಕಮ್ಯೂನಿಸ್ಟರ ಆರ್ಥಿಕತೆಯ ಮಾಹಿತಿ ಕೊಟ್ಟು, ವಿಶ್ವವ್ಯಾಪಿ ಸಹಜೀವನಕ್ಕಾಗಿ ಲೇಖಕರು ಚೆನ್ನಾದ ವಿವರಣೆಯನ್ನು ಇತ್ತಿರುವರು.

ಇದರ ಬೆಲೆ ಕೇವಲ 0-25 ನ.ಪೈಸೆ.

रूस का भविश्य

ಮೂಲ ಲೇಖಕರು: ಲಿಯೋನಾರ್ಡ್ ಶೈಪಿರೊ. ಹಿಂದಿ ಅನುವಾದಕರು: ಪಿ. ಸಿ. ಜೈನ್, ಪ್ರೇಮಗೋಪಾಲ ಮಿತ್ತಲ. ಪ್ರಕಾಶಕರು: ನೇಸನಲ್ ಅಕಾಡಮಿ, 6 ಅನ್ಸಾರಿ ಮಾರ್ಕೆಟ್, ದರಿಯಾಗಂಜ, ದಿಲ್ಲಿ-1.

ಇದರ ಕ್ರಯ 0-25 ನಯಾಪೈಸೆ ಮಾತ್ರ.

॥ ಶ್ರೀ ಧನ್ವಂತರಯೇ ನಮಃ ॥

★ ಆಯುರ್ವೇದ ★

[ಕನ್ನಡ ಮಾಸ ಪತ್ರಿಕೆ]

ಉಡುಪಿ, (ದ. ಕನ್ನಡ)

ಸಂಪುಟ ೧೪	ಮೇ MAY ವೈಶಾಖ	ಸಂಚಿಕೆ ೮

ಸಂಪಾದಕೀಯ

ಅರಿಷ್ಟ ಲ್ಯಾಸನ್ಸು ರದ್ದಾದುವೆ......?

ಇದೇ ಮಾರ್ಚ್ ತಿಂಗಳ 19ನೇ ತಾರೀಖಿನ ಮೈಸೂರು ಗಜೇಟಿನಲ್ಲಿ ಪಾನಿ ನಿರೋಧ ಶಾಸನವನ್ನು ಮೈಸೂರು ಸರಕಾರವೂ ಅಧಿಕರಿಸಿದ ವಿಚಾರ ಪ್ರಕಟಣೆ ಇದೆ. ಅನ್ನುವಾಗ ಈ ವರೇಗಿದ್ದ ಮದ್ರಾಸ್ ಪಾನ ನಿರೋಧ ಶಾಸನ ಯಾ ಇನ್ನಿತರ ನಾಜ್ಯಗಳ ಪಾನ ನಿರೋದ ಶಾಸನಗಳ ನಿಬಂದನೆಗಳು ನಮ್ಮ ರಾಜ್ಯಕ್ಕೆ ಅನ್ವಯಿಸದಂತಾಗುವುದು.

ಪಾನ ನಿರೋದ ಶಾಸನದನ್ವಯು ಈ ವರೇಗೆ ನಮ್ಮ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯೊಂದೇ ವೈದ್ಯರಿಗೆ ಬಹಳಷ್ಟು ಕಂಠಕಪ್ರಾಯುವಾಗಿ ಅವಹೇಳನ ವಾಗತ್ತು. ಬಹಳ ಉಪದ್ರಕಾರಕವಾಗಿತ್ತು. ಕಾರಣ ಈ ಜಿಲ್ಲೆ ಹಿಂದೆ ಮದ್ರಾಸು ರಾಜ್ಯದಲ್ಲಿರುತ್ತ. ಮೈಸೂರು ರಾಜ್ಯದಲ್ಲಿ ಪಾನ ನಿರೋಧ ಶಾಸನವಿಲ್ಲದ ಕಾರಣ ಮದ್ರಾಸು ಶಾಸನದನ್ವಯು ಇಲ್ಲಿಯು ವೈದ್ಯರು ಆಸವಾರಿಷ್ಟಗಳ ತಯಾರಿಸುವರೇ, ಇಡುವರೇ ಯಾ ಮಾರಾಡ ಮಾಡುವರೇ ಯಾ ಚಿಕಿತ್ಸೆಗೆ ಉಪಯೋಗಿಸುವರೇ ಕೂಡ ನಿಬಂಧನಗೊಳಪಟ್ಟಿತ್ತು. ಈ ಸಂಕಷ್ಟ ನಿವಾರಣೆಗಾಗಿ, ಅಪಮಾನ ನಿರ್ಮೂಲನಕ್ಕಾಗಿ ಇಲ್ಲಯು ವೈದ್ಯರು ಬಹಳಷ್ಟು ಶ್ರಮಿಸಿ ನಿಷ್ಪ್ರಯೋಜಕವಾಗಿತ್ತು.

ಮೈಸೂರು ರಾಜ್ಯಕ್ಕೆ ಈ ಜಿಲ್ಲೆ ಸೇರಿ ಕೆಲವು ವರ್ಷಗಳು ಕಳೆದರೂ ಈ ಜಿಲ್ಲೆಗೆ ಮಾತ್ರ ಮೈಸೂರು ಶಾಸನವಿಲ್ಲದುದರಿಂದ ಮದ್ರಾಸು ಶಾಸನದನ್ವಯ ತೊಂದರೆ ಪಡುತ್ತಾ ಇತ್ತು.

ಇದೀಗ ಮೈಸೂರು ಪಾನನಿರೋಧ ಶಾಸನ ಜ್ಯಾರಿಗೆ ಬಂದುದು ಈ ಜಿಲ್ಲೆಯ ವೈದ್ಯರಿಗೆ ಬಹಳ ಸಂತೋಷವಾಗದಿರದು. ಆದರೆ ಈಗಿರುವ ಸಂಕಷ್ಟಗಳು ಹಾಗೆ ಉಳಿಯುವಂತಾದರೆ ಈ ಶಾಸನವೂ ನಿಷ್ಪ್ರಯೋಜಕವೆನ್ನವಾಗಿದೆ. ಹಾಗೆ ನಿಷ್ಪ್ರಯೋಜಕವಾಗುವ ಪರಿಸ್ಥಿತಿ ಇನ್ನು ಉಂಟಾಗಲಾರದೆಂದು ನಮಗೆ ಆಶೆಯಿದೆ. ಕಾರಣ ಈ ಸಲ ಹೊಸ ಹಾಗೂ ಎಳೆರಕ್ತದ ಶಾಸಕರೂ ಬಹಳಷ್ಟು ಶಾಸನ ಸಭೆಯಲ್ಲಿ ಆಸನಾರೂಢರಾಗಿರುವರು. ಇವರಲ್ಲಿ ವಿಚಾರ ಶಕ್ತಿ ತುಂಬಾ ಯೋಗ್ಯವಾಗಿಯೂ, ಚುರುಕಾಗಿಯೂ ಇದೆ ಎಂಬ ಭಾವನೆ ನಮಗಿದೆ. ಮಾತ್ರವಲ್ಲದೆ ಶಾಸನ ರೂಪುಗೊಳ್ಳುವ ಜಿಲ್ಲೆಯಾದಿ ಈ ರಾಜ್ಯದ ಹಲವಾರು ಪ್ರದೇಶಗಳು ಈ ಶಾಸನದಿಂದ ವಿಮುಕ್ತವಿದ್ದು ಹೆಂಡಕುಡುಕರಿಗೂ ಏನೊಂದೂ ನಿರ್ಬಂಧಗಳಿರುವುದಿಲ್ಲ ಅನ್ನುವಾಗ ನಿಜವಾಗಿಯೂ ನಿರುಪದ್ರವಿಗಳು, ಔಷಧೋಪಯುಕ್ತಗಳು, ಶಾಸನದನ್ವಯ ನಿರ್ಲಿಪ್ತವಾದವುಗಳು ಹಾಗೂ ದೇಶೀಯ ಸಂಸ್ಕೃತಿಯ ಪೋಷಕಗಳಾದ ಆಯುರ್ವೇದೀಯ ಚಿಕಿತ್ಸಾ ಪದ್ಧತಿಗೆ, ವೈದ್ಯರಿಗೆ ಈ ಪಾನನಿರೋಧ ಶಾಸನವಿನ್ನು ಉಪದ್ರ ಕೊಡದೆ, ಇರುವ ತೊಂದರೆಗಳನ್ನೂ ದೂರೀಕರಿಸಿ ಕಾಪಾಡುವುದೆಂದು ನಮ್ಮಂತೆ ವೈದ್ಯರೆಲ್ಲರೂ ಸಾರ್ವಜನಿಕರೂ ಆಶೆಯುಂದಿರುವುದು ಸ್ವಾಭಾವಿಕವೆನ್ನಬೇಕಾಗಿದೆ.



ಆರೋಗ್ಯ ರಕ್ಷಕ ಸಚಿವರು ಹಾಗೆನ್ನಬಾರದಾಗಿತ್ತು....!

ನಮ್ಮ ಮಾನ್ಯ ಆರೋಗ್ಯ ಮಂತ್ರಿಯವರು ಕಳೆದ ತಿಂಗಳು ತಮ್ಮ ಸ್ವಂತ ಜಿಲ್ಲೆಯಾದ ದಕ್ಷಿಣ ಕನ್ನಡ ಜಿಲ್ಲೆಗೆ ಭೇಟಿ ಕೊಟ್ಟಾಗ ಈ ಜಿಲ್ಲೆಯ ಆ. ವೈದ್ಯರ ಸಂಘವು ಇವರಿಗೊಂದು ಮನವಿ ಪತ್ರವನ್ನರ್ಪಿಸಿತು. ಈ ಮನವಿ ಪತ್ರದಲ್ಲಿ ಪಾನ ನಿರೋಧ ಶಾಸನದನ್ವಯ ಅನಾವಶ್ಯಕವಾಗಿ ಇಲ್ಲಿಯ ವೈದ್ಯರನ್ನು ವಿನಾ ಕಾರಣ ಪೀಡಿಸುತ್ತಿರುವರಾಗಿಯೂ, ಹೆಂಡಕುಡುಕರಿಗೂ ಇಲ್ಲದ ಠೇವಣಾತಿಯನ್ನು ವೈದ್ಯ ವೃತ್ತಿ ಮಾಡುವವರು ಕಟ್ಟಬೇಕೆಂದು ಜಬರುದಸ್ತು ಮಾಡಿ ವೈದ್ಯರನ್ನು ಅಪಮಾನಿಸುತ್ತಿರುವರಾಗಿಯೂ ಇಂಥ ತೊಂದರೆಗಳನ್ನು ನಿವಾರಿಸಬೇಕಾಗಿಯೂ ಬರೆದಿತ್ತು.

ಅದನ್ನುತ್ತರಿಸುತ್ತ ಮಾನ್ಯ ಆರೋಗ್ಯ ಸಚಿವರಾದ| ನಾಗಪ್ಪ ಆಳ್ವರವರು "ಈ ವಿಚಾರ ತನ್ನ ಶಾಖೆಗೆ ಸಮ್ಮಂದಿಸಿದ್ದಲ್ಲ"ವೆಂದು ಹೇಳಿದರು. ಮಾನ್ಯ ಆರೋಗ್ಯ ಸಚಿವರು ಹೀಗೆಂಬುದು ಅನುಚಿತವೆಂದು ನಮಗೆ ಹೊಳೆದಂತೆ ಯಾರಿಗಾದರೂ ತಟ್ಟನೆ ಹೊಳೆಯದಿರದು. ಕಾರಣ "ಆರೋಗ್ಯ ಶಾಖೆ" ಎಂದರೆ ಆರೋಗ್ಯವಂತರ, ಸುಖಜೀವಿಗಳ ಶಾಖೆಯೆಂದು ಅರ್ಥವಲ್ಲ. ಈ ರಾಜ್ಯದ ಆರೋಗ್ಯ ರಕ್ಷಣೆಯ ಭಾರ ಈ ಶಾಖೆಯ ಮುಖ್ಯ ಗುರಿಯಾಗಬೇಕು. ಅನ್ನುವಾಗ ಆರೋಗ್ಯ ರಕ್ಷಣೆಯ ಸೊತ್ತುಗಳಿಗೆ ಗೆದ್ದಲು ಹಿಡಿಯುವ ಪರಿಸ್ಥಿತಿಯಲ್ಲಿ ಅದನ್ನು ನಿವಾರಿಸುವುದು ಆರೋಗ್ಯ ಶಾಖೆಯ—ಈ ವಿಭಾಗದ ಮಾನ್ಯ ಮಂತ್ರಿಗಳ ಮುಖ್ಯ ಕರ್ತವ್ಯ. ವೈದ್ಯರಿಗೆ ತೊಂದರೆ ಕೊಡುವ ಯಾವದೇ ವಿಭಾಗವಿರಲಿ; ಅದರೊಡನೆ ಸಮಜಾಯಿಸಿಯೋ, ಕಾಡಿಯೋ ಆಗುವ ತೊಂದರೆಗಳನ್ನು ನಿವಾರಿಸಿ, ಮುಂದೆ ಅಂಥಾ ಯಾ ಬೇರಾವುದೇ ತರದ ತೊಂದರೆಗಳು ಆಗದಂತೆ ಜಾಗ್ರತೆ ವಹಿಸಿ ಆರೋಗ್ಯ ರಕ್ಷಣೆಗಿಂತ ಹೆಚ್ಚಿನ ಭದ್ರತೆಯನ್ನು ಆರೋಗ್ಯ ರಕ್ಷಣೆ ಮಾಡುವ ವೈದ್ಯರಿಗೆ ಒದಗಿಸುವುದು ಆದ್ಯ—ಮುಖ್ಯ ಕರ್ತವ್ಯವಾಗಿದೆ.

ಇಂಥಾ ಭಾವನೆ ಕೂಡ ಇಲ್ಲದ ಮಾನ್ಯ ಮಂತ್ರಿಗಳು ಏನನ್ನು ಮಾಡಿಯಾರು? ಎಂದು ವೈದ್ಯರು ಯಾ ಜನ ಕೇಳುವುದಕ್ಕೆ ಯಾ ಆಡುವುದಕ್ಕೆ ಮಾನ್ಯ ಮಂತ್ರಿಗಳು ಮುಂದೆ ಅವಕಾಶ ಕೊಡರೆಂದು ನಂಬಿದ್ದೇವೆ. ಹಾಗೂ ಅಂದು ಹಾಗೆ ಹೇಳಿದರೂ ಅದರ ಒತ್ತಿನಲ್ಲಿಯೋ ತನಗೆ ಸಂಬಂಧಪಟ್ಟದ್ದಲ್ಲದಿದ್ದರೂ ಆ ಶಾಖೆಗೆ-ವಿಭಾಗಕ್ಕೆ ಈ. ವಿಚಾರವನ್ನು ತಿಳಿಸಿ ಪ್ರಯತ್ನಿಸುವೆನಾಗಿ (ಇವು ಮಾಮೂಲಿನ ಮಾತುಗಳು) ಹೇಳಿದುದು ಸ್ವಲ್ಪ ಸಮಾಧಾನಕರವೆನಿಸಿತು. ಈ ಮಾತಾದರೂ ಕಾರ್ಯತಃ ಜಯಗೊಳಿಸಿ ವೈದ್ಯರಿಗಿರುವ, ಆಗುತ್ತಿರುವ ತೊಂದರೆಗಳು ದೂರಾಗುವುದೇ ಕೊಟ್ಟ ಮಾತಿಗಿರುವ ಘನತೆ-ಬೆಲೆ ಎಂದು ತಿಳಿದರೆ ತಪ್ಪಾಗಲಾರದು.

ಮಾನ್ಯ ಆರೋಗ್ಯ ಸಚಿವರು ಅಂಥಾ ಅಪವಾದಕ್ಕೆ ಗುರಿಯಾಗಲಾರರೆಂದು ಭರವಸೆಯೂ ಈಗ ಮೂಡುತ್ತಲಿದೆ. ಕಾರಣ ಅಲ್ಲಿಂದ ಹೊರಬಿದ್ದೊಡನೆ ಈ ಕುರಿತು ನುರಿತವರೊಡನೆ ಚರ್ಚಿಸಿ, ಅಲ್ಲಿಂದ ಬೆಂಗಳೂರಿಗೆ ಹೋದೊಡನೆ ಕಾರ್ಯತಃ ಪ್ರಯತ್ನಿಸಲು ಆರಂಭಿಸಿರುವರಾಗಿಯೂ ಕೇಳಿಬರುತ್ತಿದೆ. ಏನಿದ್ದರೂ ಕಾರ್ಯತಃ ಸಫಲ ಕಂಡರೆ ಮಾತ್ರ ಉಪಯೋಗ ಏನಃ ವೈದ್ಯರಿಗೆ ಬೇರೆಲ್ಲ ಸಮಾಧಾನವಾಗದ ಪರಿಸ್ಥಿತಿ ಈಗಿದೆ.

ಆಯುರ್ವೇದದ ಸುದೈವ?

ಕೇಂದ್ರದಲ್ಲಿ ಆರೋಗ್ಯ ಮಂತ್ರಿಣಿಯಾಗಿ

ಡಾ| ಸುಶೀಲಾ ನಾಯ್ಯರ್

ಆಯುರ್ವೇದದ ಬಗ್ಗೆ ತುಂಬಾ ಕಳಕಳಿ, ಅಭಿಮಾನವಿದ್ದ, ಶ್ರೀಮತಿ ಸ್ವತಃ ಡಾಕ್ಟರಳಾಗಿ ವೈದ್ಯಕೀಯ ಪರಿಜ್ಞಾನವುಳ್ಳ, ಗಾಂಧೀಜಿಯವರ ಪರಮ ಭಕ್ತೆಯೂ ಆದ ಡಾ| ಸುಶೀಲಾ ನಾಯ್ಯರ್‌ರವರನ್ನು ಈ ಸಂಪುಟದಲ್ಲಿ ಕೇಂದ್ರ ಸರಕಾರವು ಆರೋಗ್ಯ ಮಂತ್ರಿಣಿಯಾಗಿ ನೇಮಕಗೊಳಿಸಿದ್ದು ಆಯುರ್ವೇದದ ದೇಶೀಯ ಸಂಸ್ಕೃತಿಯ ಭಾಗ್ಯ ಉದಯಿಸಿದೆಯೋ ಎಂಬ ಭಾವನೆ ಉತ್ಪನ್ನವಾಗತೊಡಗಿದೆ.

ಡಾ| ನಾಯ್ಯರರು ಆಯುರ್ವೇದವನ್ನು ಉದ್ಧಾರ ಮಾಡಲು ಶಕ್ಯರಾಗದಿದ್ದರೂ ಹಿಂದಿನವರಂತೆ ಆಯುರ್ವೇದದ ಕುರಿತು ಮೊಸಳೆಯ ಕಣ್ಣೀರಿಕ್ಕಿ ಆಯುರ್ವೇದವನ್ನು ನಿರ್ನಾಮ ಮಾಡುವ ಕುಹಕ ಪ್ರಯತ್ನಗಳಿಗೆ ಆಸ್ಪದ ಕೊಡರೆಂಬ ಆಶೆ ಇದೆ.

ನಮ್ಮ ಮೈಸೂರು ರಾಜ್ಯದಲ್ಲಿಯೂ ಡಾ| ನಾಗಪ್ಪ ಆಳ್ವರವರು ಆರೋಗ್ಯ ಸಚಿವರಾಗಿ ಬಂದುದೂ ಡಾ| ಸುಶೀಲಾ ನಾಯ್ಯರರಂತೆ ಆಯುರ್ವೇದಕ್ಕೆ ಪೋಷಕರಾಗಿಯೇ ಬಾಳುವರೆಂಬ ನಂಬಿಕೆಯಿದೆ. ಹಾಗೂ ಇದರಿಂದ ಹೆಚ್ಚಿನ ಲಾಭ ನಮ್ಮ ಮೈಸೂರು ರಾಜ್ಯದ ಆಯುರ್ವೇದ ಕ್ಷೇತ್ರಕ್ಕೆ ದೊರೆತು ಇಡೀ ಭಾರತವರ್ಷ ನಮ್ಮ ಮೈಸೂರು ರಾಜ್ಯದ ಆಯುರ್ವೇದದ ಕೈದೀವಿಗೆಯನ್ನು ಎತ್ತಿ ಹಿಡಿಯುವಂತಾಗಲೆಂದು ಹಾರೈಸುತ್ತೇವೆ.

ಸಂ|

ಯೋಗ ರತ್ನಾವಳಿ

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಮಂತ್ರ:- ಓಂ ನಮೋ ಭಗವತೆ ಅಂಬಿಕೆ—ಹ್ರಿಂ ಹ್ರೀಂ ಅಮೃತೆ ಅಮೃತೋದರೆ ಅಮೃತ ವರ್ಷಣಿ ಹಿತ ಹಾರಿಣಿ ಶೀಘ್ರಂ ಪ್ರಸೂತಿಂ ಕುರು| ಹ್ರೂಂ ಸ್ವಾಹಾ ॥—॥ ತುಪ್ಪಮಂ ಮಂತ್ರಿಸಿ ಕುಡಿಗೆ ಪ್ರಸೂತೆಯಕ್ಕುಂ ||—|| ಮತ್ತಮೀ ಮಂತ್ರಮಂ ಹಲಿಗೆಯೊಳು ಮಣಿ ಕೆರೊಳು ಬರೆದೆ ಸರ್ವ ರಕ್ಷೆ. ॥—॥ ಮಂತ್ರ:- ಕ್ಷಾಂ ಕ್ಷೀಂ ಕ್ಷೂಂ ಕ್ಷೇಂ ಕ್ಷೈಂ ಕ್ಷೌಂ ಕ್ಷಃ ಕ್ಷಃ|| ಇದು ದಿಶಾ ಬಂಧನ॥ ರಕ್ಷಾ ಮಂತ್ರ:॥ ಋತು ಸಮಯದಲು ಜಲಕ್ರೀಡೆಯನಾಡಿ ಪುರುಷ ಸಂಭೋಗ ಮಾದೊಡಂ, ಪಿರಿದುಂ ನೀರಂ ಕುಡಿದೊಡಂ ಜಲ ಗರ್ಭಮಕ್ಕುಂ| ಹಾವು, ಕ್ಷುದ್ರ ಕೀಟಂಗಳು ಸ್ವಾಪನನ ತೆರನಪ್ಪವುಂ॥ ಅಂನ ಪಾನದೊಳಗೆ ಮಲ ಮೂತ್ರಂ ಗೆಯ್ದ ಡಂ। ಮುಟ್ಟವೆ ಗಂಡಲ್ಲಿ ರಕ್ತಂ ಪೋಗದೊಡಂ, ಪಿರಿದಪ್ಪ ಹೊಗೆಯಲಿರ್ದೊಡಂ— ಧೂಮ ಸಂಗ್ರಹವಾಗಿ ಗರ್ಭಂ ಬೆಳೆಯ ಮಹಾ ಪೀಡೆಯಕ್ಕುಂ| ಜಲ ಗರ್ಭಕ್ಕೆ ಹೊಟ್ಟೆ ಮಿಂಚುವುದುಂ—ಪೊಕ್ಕುಳು ಮಗುಳ್ವುದು ಮಕ್ಕುಂ ||—|| ಸರ್ಪ ಗರ್ಭಕ್ಕೆ ಮೆಯಿ ಮುರಿವುದುಂ ಪಿರಿದಪ್ಪಾಗಳಿಕೆಯುಂ| ಸುಯಿವುದು ಮಕ್ಕುಂ— ಇಲಿಕಪ್ಪೆ ಯೊಂಬಿನಂ ಕೊಲುವುದು ಮಕ್ಕುಂ ॥—|| ಪಲ್ಲಿ ಮೊದಲಾದ ಗೋಡೆಯ ಕೀಟ ಗರ್ಭಕ್ಕೆ ನೊಣನಂ ಕೋಲುವುದುಂ| ಹುಳುವಂ ತಿಂಬುದುಂ| ಕೆರಂ ಮಲಗಿಕೊಂಡಿ ಪ್ಪುದುಂ ಮಾಂಸರಕ್ತ ಪ್ರೀತಿಯುಂ— ಕಲಿಹರಿಗೆಯ್ವುದು ಮಕ್ಕುಂ ||—॥ ಎಂದೂ ನಿದ್ರೆ ಇಲ್ಲದುದಂ, ಹಸುಮಕ್ಕಳ ಹೇಲ ತಿಂಬುದುಂ—ಸ್ವಾನ ಗರ್ಭ ಚಿಹ್ನ ॥—॥ ಧೂಮ ಗರ್ಭಕ್ಕೆ-ಉಷ್ಣಕಾರದದುಂ-ಮೆಯಿ ಬೆಮರುವುದುಂ. ತುಪ್ಪ, ಬೆಂಣ, ಹಾಲುಗಳಂ ಪಿರಿದಾಗಿ ಉಂಬುದುಂ||—|| ರಕ್ತ ಸಂಗ್ರಹವಾಗಿ ಬೆಳೆದು ಹೊಟ್ಟೆ ಕಲ್ಲಂತಕ್ಕುಂ ॥—॥

ಇಂನು ಎಲ್ಲಾ ಗರ್ಭಕ್ಕೆ ಚಿಕಿತ್ಸೆ:— ಜಲ ಗರ್ಭಕ್ಕೆ—ಹೊಕ್ಕುಳ ಕೆಳಗೆ ನಾಲ್ವೆರಳನಳದು ಶಸ್ತ್ರ ಕರ್ಮಂ ಗೆಯ್ಗೆ || ಮೇಣು-ಹಿಪ್ಪಲಿಯಂ ಕಳ್ಳಿಕೊಂಬಿ ನೊಳು ಇಪ್ಪತ್ತೊಂದು ದಿನವಿರಿಸಿ ತೆಗೆದು—ಸೈಂಧವ, ಅರಿಸಿನಂ ಬೆರಸು ನೀರಲು ಕುಡಿಯೆ ಜಲ ಗರ್ಭಂ ಕೆಡುಗುಂ ||—||

ಗರುಡೋದ್ಗಾರದ ಮಣಿಯಂ ನೀರೊಳು ತೆಯಿದು ಆ ನೀರಂ ಕುಡಿಯೆ ಸರ್ಪಗರ್ಭಂ ಮಾಣ್ಗುಂ || ಅಥವಾ—ಮುಂಗುಲಿಯ ಹಲ್ಲಂ ತನೆಯಾಡಿನ ಮೂತ್ರ

ದಲು ಶೊಳೆದು ಯೋನಿಯುಮಂ ಹೊಟ್ಟೆಯುಮಂ ಪೂಸುಗೆ | ಮೇಣು—ಟಂಕಣ ಕ್ಷಾರಮಂ ಎಣ್ಣೆಯುಂ ಕಲಸಿ ಕುಡಿಯೆ ಸರ್ಪಗರ್ಭಂ ಮಾಣ್ಗುಂ ॥ ಬನಸಪಾರಿಯ ಕಾಯುಂ ತಣ್ಣೀರಲ್ಲರೆದು ಕುಡಿಯೆ ಮಾಣ್ಗುಂ || ಬೆಳ್ಳವತ್ತದ ಬೇರಂ ಕರಿಯ ತುರು ಳಿಯ ಕೂಡಿಸಿ ಕಟ್ಟಂ ಕುಡಿಯೆ ಮಾಣ್ಗುಂ ||

ಪಲ್ಲಿ ಮೊದಲಾದ ಕೀಟಕ ಗರ್ಭಕ್ಕೆ—ಈಶ್ವರಿ, ಬಜೆ, ಅರಸಿನ, ಹಾವ್ರ ಮೆಕ್ಕೆ, ದೇವದಾರಿ ಇದರ ಕಷಾಯುಮಂ ಕುಡಿಯೆ ಕೀಟಕ ಗರ್ಭಂ ಮಾಣ್ಗುಂ ॥ ಮಂತ್ರ—ಓಂ ನಮೋ ಸಾಹಿಸಾಯ—ಸರಿಚಾಪ ಗುರು, ವೆಖ, ಹುಲಿ, ದಿಂಯು, ವಂತರಂ, ಖಣಾ ಖಬೂ ವುರಖ ಸ್ವಾಹಾ ॥ ಇದು ಹೊಕ್ಕುಳು ಕೊಯ್ವ ಮಂತ್ರ- ಮತ್ತಂ ಮಂತ್ರ—...
ಈ ಪಂಚಾಕ್ಷರ ಪಿಂಡ ಮಂತ್ರಗಳಂ—ಪಾದಾನಿ ಮಸ್ತಕಾಂತಂ ಆರೋಹಿ ಅವ ರೋಹಿಯು ಕ್ರಮದಪ್ಪದೆ ವಿನ್ಯಾಸಂ ಮಾಡುಗೆ—ಸರ್ವರಕ್ಷೆ || — || ಓಂ ನಮೋ ಭಗವತಿ ವೃಷ ಭಯಕ್ಷಾಯ ಸರ್ವ ವನ ವೀರಾಯ ತುಷ್ಟಿ ಕರಾಯ ಪುಷ್ಟಿ ಕರಾಯ ಸ್ರಿಂ ಸ್ರಂ ದ್ರಾಂ ಹ್ರಿಂ ಸ್ವಾಹಾ || — || ಈ ಮಂತ್ರದಿಂ ಬೇಪಿನೆಲೆಯಂ ಲೊಕ್ಕಿಯಲೆಯಂ ಮಂತ್ರಿಸಿ ಕುಡುವುದು ॥ ಬಾಗಿಲ ಇದ್ದೆಸೆಯುಲಿ ಸಿಕ್ಕುವುದು ॥ ಓಂ ಚಕ್ರೇಶ್ವರಿ ಚಕ್ರಾಂಕಿ ಚಕ್ರಣ—ಸರ್ವ ಭೂತೋಪದ್ರವ ವಿನಾಸಿನಿ ಸ್ವಾಹಾ| ಈ ಮಂತ್ರದಿಂ ಕುಡುಗೋಲನು ಮಂತ್ರಿಸಿ ಕೈಯ್ಯಲ್ಲಿ ಕೊಡುವುದು. || — || ಓಂ ನಮೋ ಭಗವತೆ ಜಕ್ಕಿಣಿ । ಹ್ರೀಂ ಹ್ರೀಂ ಶ್ರೀಂ ತವ ಹಂತೇಣ ಸುರಂಬ ಸ್ವಾಹಾ|| ಈ ಮಂತ್ರದಿಂ ಹೂವಿನ ನೇಣನಭಿಮಂತ್ರಿಸಿ ಬಾಣತಿಯ ಕೊರಳೊಳಂ ಕಟ್ಟುಗೆ ಸರ್ವರಕ್ಷೆ|| ಕುಯ್ಯಲ ಕುಳಿಯನಗಳ್ವೆಡೆ—ಓಂ (ಮೂಲದಲ್ಲಿ ದೀರ್ಘದ ಗುರುತು ಹೀಗಿದೆ) ನಮೋ ಭಗವತೇ ಕ್ಷೇತ್ರಾಧಿಪತೇ ವಿರಳ ದಂಷ್ಟ್ರಾಯ ರೌದ್ರ ಮೂರ್ತೇ ಖಡ್ಗ ಕಮಲಧಾರಿಣೇ ಅಸ್ಯಕ್ಷತ್ರ ಶಿಶೂವತಿ ರಕ್ಷ=ಶ= ಈ ಕ್ಷೇತ್ರಪಾಲ ಮಂತ್ರದಿಂ ಗುದ್ದಲಿಯನಭಿಮಂತ್ರಿಸಿ ಏಳು ಸಾಲು ವೀರ ಭಟನಿಂದಗಳಿಸಿ ತಾಂ ಬೂಲ ಗಂಧಾಕ್ಷತೆಗಳಂ ಆತಂಗೆ ಕೊಟ್ಟು-ಹೋಗಲುಪೇಳು ||— ಮಂತ್ರ:- ಓಂ ಹ್ರೀಂ ಬ್ರಹ್ಮರೂಪಿಣೀ ಕ್ಷ್ಮ್ಲ್ರ್ಯೂ ಸ್ವಾಹಾ||— ಈ ಮಂತ್ರದಿಂ ಕುಳಿಯ ನಡುವೆ ಈ ದೇವತೆಯುಂ ಮೂಡ ದೆಸೆಯುಲಾಹ್ವಾನಂ ಮಾಡುವುದು||- ಮಂತ್ರ:- ಓಂ ನಮೋ ವಿದ್ಯಾವಾಸಿನಿ ವಜ್ರಧಾರಿಣಿ ಆಂ ಕ್ರೋಂ ಹ್ರೀಂ ಸ್ವಾಹಾ ॥—॥ ಇಂನು ತೆಂಕಲು ||- ಓಂ ನಮೋ ಯಮಾಂತಕಿ ಶಕ್ತಿಧಾರಿಣಿ ಆಂ ಕ್ರೋಂ ಹ್ರೀಂ ಸ್ವಾಹಾ ||—|| ಪಡುವಲು- ಓಂ ನಮೋ ವರುಣಾಧಿ ದೇವತೇ ಹಲ ಧಾರಿಣಿ ಆಂ

ಕ್ರೋಂ ಹ್ರೀಂ ಸ್ವಾಹಾ ||—|| ಬಡಗಲು- ಓಂ ನಮೋ ಧನಧಾನ್ಯ ಸುರಭಿ ಅಮೃತಧಾರಿಣಿ ಆಂ ಕ್ರೋಂ ಹ್ರೀಂ ಸ್ವಾಹಾ ||—|| ಇಂತೀ ಸಾಲ್ಕು ದೆಸೆಗಳಂ ಯಥೋಕ್ತ ಕ್ರಮದಿಂ ಸ್ಥಾಪಿಸಿ ಧಾನ್ಯಂಗಳಿಂ ಹುಗ್ಗಿಯಂ ಅನೇಕ ಮಂಗಲ ದ್ರವ್ಯಂಗಳಿಂದಂ ಸ್ನಾನಂ ಮಾಡಿ— ಮನೆಯೊಳಗಂ ಹೊಕ್ಕು ಶಾಂತಿ ಹೋಮಮಂ ಮಾಡಿ ಪುಣ್ಯಾಹಮಂ ಬಾಜಿಸಿ ದಾನ ಸ್ನಾನಾದಿಗಳಂ ಮಾಡಿ-ಸಸೆಯಕ್ಕಿ ಚಿಗುಳಿ ಯಂಬಿರಿ-ದ್ವಾದಶ ದಿನದಿಂ ಬಳಿಕ ಮುನ್ನಿನ ಕ್ರಮದಲು-ಬಾಜಿಯಲೆ, ಬೋಳ ತರ, ಜೇವಿನೆಲೆ, ಲೊಕ್ಕಿಯಲೆ, ಎಳ್ಳು, ಅರಿಸಿನ ಇಸಿತಂ ಹಾಲಲರದು ಮೆಯಿ ಯಂತಿಮರ್ದು ಸ್ನಾನಮಂ ಮಾಡಿ— ಕುಳಿಯನರ್ಜಿಸಿ ಸಿಚ್ಚಲುಂ ಗಜದಂತ, ಸಾಸವೆ, ಜೇವಿನೆಲೆ, ಲೊಕ್ಕಿಯಲೆ, ಹೀಲಿ, ಗೆರದೊಟ್ಟೆ ಮಹಿಷಾಕ್ಷಿ ಗುಗ್ಗುಲು, ಶ್ರೀಗಂಧ—ಇಸಿತಮಂ ಸಿಚ್ಚಲುಂ ಕೂಸಿಂದಂ ಬಾಣತಿಗಂ ಧೂಪಮಂ ಕೊಟ್ಟು ಮಾಲೆಯ ಮೂಡುವಾಗ ಕರ್ಜ ಕಳೆದು ಊಡುಗೆ ||—|| ಬೆಂಣೆಯನಿಕ್ಕುವಾಗ ಮಂಡೂಕ ಬ್ರಹ್ಮಿಯ ರಸದಲು (ಮಂಡೂಕ ಬ್ರಹ್ಮಿ=ಒಂದೆಲಿಗ) ಹಿಪ್ಪಲಿಯ ಚೂರ್ಣಸಿಕ್ಕಿ ಇಪ್ಪತ್ತನಾಲ್ಕು ಸಾಳು ಭಾವಿಸಿ ಮೆಲಲಿಕ್ಕುಗೆ||—||

ಮೇಣು- ಬಜೆಯಂ ಚೂರ್ಣಂ ಮಾಡಿ ಆ ರಸದಲು ಕಲಸಿಯುಂ ಮುನ್ನಿನ ಕ್ರಮದಲಿಕ್ಕುಗೆ||; ಮಂತ್ರ:- ಐಂ ಶ್ರೀಂ ಹ್ರೀಂ ವಾಗ್ವಾದಿನೀ ನಮಃ|| ಇದು ಬೆಂಣೆಯನುಂ ಮಂತ್ರಿಸುವ ಮಂತ್ರ||—|| ಇದರಲ್ಲಿ ದಿವ್ಯನಾದಮುಂ ಪ್ರಜ್ಞಾ ನುಮಕ್ಕುಂ||—"

ಹೊಳೆಯ ಮೆಟ್ಟಲು ಹೋಹಾಗಳು ಪುಣ್ಯ ಸ್ತ್ರೀಯರಂ ಕರೆಯಲಟ್ಟಿ ತಾಂಬೂಲ, ಗಂಧಾಕ್ಷತೆ, ಹೊಂಗು ನೂಲಂ ಕೊಟ್ಟು ತೊರಿ ಕರೆವುಳ ಊರಲು ಕಲಸುಗೂಳಂ ಕೊಂಡು ಪೋಗಿ||- ಮಂತ್ರ:- ಓಂ ನಮೋ ನಂದಿನಿ ಕಾಮಣ ಕಾಮ ರೂಪಿಣಿ ಸರ್ವಾಭರಣ ಭೂಷಿತೆ ನದಿ ತಟಾಕ ಸರೋವರ ರಕ್ಷಿಣಿ ಬಾಣತಿ ಶಿಶುಂ ರಕ್ಷ=ಹ್ರೀಂ ಸ್ವಾಹಾ||—|| ಕಂನಡಿ ಕಲಿಶಮಂ ಹೊಂನ ಬಂಣಮುಪ್ಪ ನಂದಿನಿಗೆ ಬಲಿಯಂ ಕೊಟ್ಟು ಮನೆಗೆ ಬಂದು ಪಿಟ್ಟನ ಸೊಡರಂ ಪಂಚ ವರ್ಣದ ಬಳುವೆ ಯಿಂದಂ ಉಪ್ಪು, ಸಾಸವೆಯಿಂದಂ ಬಾಣತಿಗಂ ಶಿಶುವಿಂಗಂ ನಿವಾಳಿಸಿ ಬಂದ ಬಟ್ಟೆಯಲ್ಲಿ ಬಿಟ್ಟು ಮನೆಯಂ ಪುಗುವಾಗಳು- ಮಂತ್ರ:- ಓಂ ಶ್ರಿಯಾದೇವತೆ ಕ್ಷೀರ ಸಾಗರ ವಾಸಿನಿ ಸುವರ್ಣ ಕಮಲ ಧಾರಿಣಿ ಧಾನ್ಯ ಸಂಪತ್ಕರಿ| ಶ್ರೀಕುರು ಸ್ವಾಹಾ ||—|| ಈ ಮಂತ್ರದಿಂ ಮಂತ್ರಿಸಿ ಮನೆಯಂ ಪೊಗೆ ಲೇಸು||—|| ಹಾಲು ಮರನ ತಳಿರ ಹಾಲಲಿಕ್ಕಿ ಕಾಸಿ ಶರ್ಕರೆವೆರಸಿ ಕುಡಿಗೆ ಮೊಲೆವಾಲು ಲೇಸಕ್ಕುಂ||

ಆ ಕಾಲದಲು ದಾಸಗಳೆರಡೆರಡು-ಅದಲ್ಲಿ ಹಲ್ಲಿ [illegible] ಯರಡು ತಿಂಗಳಿಗೆ ಹಲ್ಲಿ ಬಂದರೆ ಆ [illegible] ತಿಂಗಳಿಗೆ ಹಲ್ಲಿ ಬಂದರೆ—ತಂದೆಗೆ ಕೇಡು, ನಾಲ್ಕು ತಿಂಗಳಿಗೆ ಹಲ್ಲಿ ಬಂದರೆ [illegible] ದವರಿಗೆ ಕೇಡು॥ ಅಯಿದು ತಿಂಗಳಿಗೆ ಹಲ್ಲಿ ಬಂದರೆ [illegible] ಬರಿಕೆಯಿಗುಂ|| ಆರು ತಿಂಗಳಿಗೆ ಹಲ್ಲಿ ಬಂದಡೆ [illegible] ಧನವುಂ ಕೆಡುಗುಂ॥—|| ಆ ದೋಷಕ್ಕೆ [illegible] ಮಮಂ ಮಾಡಿಸಿ ಶಾಂತಿಗೆಯ್ವುದು [illegible] ಮುಂನ ಬಂದೊಡೆ ಅರಸಕ್ಕುಂ॥ ಬಂಧು ಕ್ಷಯಂ ಧನ [illegible] ಮುಂದವಾಗಿರಲು ಬಂದಡೆ ಕೇಡು ||—|| [illegible] ಹಲ್ಲ ಮಾಡಿಸಿ ಕಿರುಗಣಿಕೆಯುಕೊಂಡು-ಬಾಳಿನ [illegible] ಬಂಣದ ಅಡುಗೆಯುಂ ಅನೇಕ [illegible] ತಾಯಿಯುಂ ಅಂಬಿಕಾ ದೇವಿಯು ಬಸದಿಗೆ ಹೋಗಿ-ದೀ[illegible]

ರ್ಚನೆಯಿಂದರ್ಚಿಸಿ ಶ್ರೀ ಪಾದದಲ್ಲು ಹೊಂನ ಹಲ್ಲ ನೇರಿಸುವುದು॥ ಮಂತ್ರ:- ಓಂ ನಮೋ ಭಗವತಿ ವಜ್ರಾಂತಿ ವಜ್ರಾಧರೆ ವಜ್ರಕಾಯೆ ಯೇಹಿ ಶಿಶುಂ ರಕ್ಷ- ಹ್ರಿಂ ಕ್ಷ್ರೌಂ ಠ= ಈ ಮಂತ್ರದಿಂ ದೇವಿಗೆ ಪೊಡಮಟ್ಟು ದೇವಿಯ ಮುಂದಣ ಚರುಪಿನ ತುಯ್ಯಲಂ ತುಪ್ಪ ಶರ್ಕರೆವೆರಸಿ ಶಿಶುವಿಂಗೆ ಊಡಿ ಶುಭ ಲಗ್ನದಲು ಅನ್ನ ಪ್ರಾಶನಂ ಮಾಡಿ— ತಾನುಂ ಪುಣ್ಯಸ್ತ್ರೀಯರುಂ ಉಂಡು ಜಾತ್ರೆಯುಂ ಮಾಡಿ ದೇವಿಯ ಗಂಧೋದಕಾಕ್ಷತೆಗಳಂ ಮನೆಗೆ ಕೊಂಡು ಬಂದು ಯಲ್ಲಾಯಡೆಗಳಂ ತಳಿದು ಯಲ್ಲಾಯಡೆಗಳಂ ಅಭಿಷೇಕಂ ಗೆಯ್ದು ಮುಗಿದಲ್ಲಿ ಆಹಾರ ದಾನಮಂ ಮಾಡಿ ಅವರ ಹರಕೆಯಂ ಕೊಂಡು ಈ ಪರಿಯಲು ಮಾಡಲು ಪರಮಾಯುಷ್ಯಂ ಬರಂ ಸುಖದಿಂ ಬಾಳ್ವರು ॥—॥

ಇಂನು ಹುಟ್ಟಿದ ದಿನಂ ಮೊದಲುಗೊಂಡು ಹತ್ತು ದಿನ ಪರಿಯಂತ ಪಿಡಿವ ಬಾಲಗ್ರಹಂಗಳಂ ಪೇಳ್ವೆ ||-|| ಅವಾವುವೆಂದೊಡೆ—

ಗಂಧಿನಿ, ಭೀಷಣಿ, ಘಂಟಾಳಿ, ಕಾಕಾಳಿ. ಹಂಸಿನಿ, ಹೂಂಕಾರಿ, ಮುಕ್ತ ಕೇಶಿ, ತ್ರಿವೇದಿಕೆ, ತೊಂಡಿನಿ, ಸಂದಿನಿಯೆಂಬ ದೇವತೆಗಳ್ಗೆ—ಬಲಿಗೊಡುವ ಕ್ರಮ.

ಮಂತ್ರ:- ಓಂ ಹ್ರೀಂ ಗಂಧಿನಿ ಬಾಲಿಕಂ ಮುಂಚ=ಬಲಿ ಗೃಹ್ಣ= ಸ್ವಾಹಾ ಯಲ್ಲಾ ದೇವತೆಗಳ ಪೆಸರನೀ ಮಂತ್ರದಿಂ ಪೇಳ್ದು ಬಲಿಯಂ ಕೊಡುವುದು ॥—||

ಇಂನು ತಿಂಗಳು ಮೊದಲುಗೊಂಡು ಹಂನೆರಡು ತಿಂಗಳು ಪರಿಯಂತಂ ಪೀಡಿಸುವ ದೇವತೆಯರಂ ಪೇಳ್ವೆ॥—॥ ಮೊದಲ ತಿಂಗಳು ಮಸಣಿಯೆಂಬ ದೇವತೆ ಪಿಡಿದೊಡಾ ಕೂಸುಂ ಕಾಗೆಯ ಸ್ವರದಿಂದಳುಗುಂ॥ ಮೈಯಿಹದ್ದಿನ ಗಂಧ ನಾರುಗಂ|| ಮೂತ್ರಂ ರಕ್ತದಂ ತಪ್ಪದುಂ ಕಂಣಂತೆರೆಯಲಾರದಿಪ್ಪದುಂ॥—ಅದಕ್ಕೆ— ಬಲಿ, ಹಾಲು, ಪುಡ್ಡು, ಕಚ್ಚನೆಯ ಹೂ, ರಕ್ತ ಚಂದನ, ಕಬ್ಬಿನ ರಸದ ತುಯ್ಯಲು ಒಟ್ಟಿನ ಸೊಡರು, ಧೂಪ ದೀಪಗಳ್ವೆರಸು ಮನೆಯ ತೆಂಕಣ ದೆಸೆಯಲು ಬಲಿಯ ಕೊಟ್ಟು— ಪಂಚಪಲ್ಲವದ ನೀರಂ (ಪಂಚ ಪತ್ರೆ=ಮಾಚಿ ಪತ್ರ ಮಿಯ್ಯಲೆರೆಗೆ|| ಗುಗ್ಗುಲು ಗೋದಂತ, ತಗರ ಕೋಡು ಇಂತಿವಂ ಧೂಪವಿಕ್ಕುಗೆ। ಆ ದೇವತೆ ಪಿಂಗಿಪೋಕುಂ||— ಮಂತ್ರ:- ಓಂ ನಮೋ ಮಸಣಿ ಏಹಿ-ಬಲಿಂ ಗೃಹ್ಣ-ಮುಂಚ ಬಾಲಿಕಂ ಸ್ವಾಹಾ॥—||

ಯೆರಡು ತಿಂಗಳ ಕೂಸಂ [illegible] ದೇವತೆ ಹಿಡಿದಿರ್ದಾಡೆ [illegible] ಹಿರಿದು ಮಳುಗುಂ. ಮೆಯ್ಯಿ ತೊಂಪ [illegible]. [illegible] ಹಾಲಂ ಕಾರುವುದುಂ, ಜ್ವರಂ ಕೆಸರಿಂ [illegible], [illegible] ವುದುಂ, ಮೆಯ್ಯಿ ತಂಬೀತಪ್ಪುದುಂ, [illegible]— [illegible] ಅದಕ್ಕೆ ಬಲಿ— ಕರಿಯ ಹೂ. ಕರಿದಾಗಿ ಅಟ್ಟ [illegible] ಮಾಡಿದ [illegible] ಕೂಸಲು-ಇವು ಬಲಿ॥— ಮಂತ್ರ:- [illegible], ಧೂಪ [illegible] ದೆಸೆಯೊಳು ಬಲಿಯುಂ ಕೊಟ್ಟು ಮೂರು ದಿವಸಂ [illegible] ಮುಂಪೇಳ್ದ ದೂಪಕ್ಕೆ ಆ ದೇವತೆ ಬಿಟ್ಟು ಪೋಕುಂ॥ ಮಂತ್ರ:- ಓಂ [illegible] ವತಿ ಪಾಲಿಸಿ ಏಹಿ ಬಲಿಂ ಗೃಹ್ಣ ಬಾಲಕಂ ಮುಂಚ ಸ್ವಾಹಾ — [illegible] ಮಂತ್ರಿಸೆ ಬಿಟ್ಟು ಪೋಕುಂ —॥

ಮೂರು ತಿಂಗಳ ಕೂಸಂ [illegible] ದೇವತೆ ಹಿಡಿದಿರ್ದಾಡೆ [illegible] ಬೆಚ್ಚಿ ಅಳುವುದು. ಮಲ ಮೂತ್ರಗಂಳು [illegible] ಪೋಪುದುಂ [illegible] ದುಂ ಮೆಯ್ಯಿ ಶಿಪಸಪ್ಪ ಗಂಧ ನಾರ್ಪುದುಂ॥— ಅದಕ್ಕೆ ಬಲಿ [illegible] ಮಾಡಿದ ಕೂಳು ಕಬ್ಬಿನ ರಸ, ಸೂಸಲು, ಶ್ರೀ ಗಂಧ, ಕೆಚ್ಚನ [illegible] ಗಂಧ [illegible]

ವಸಂತ ರೋಗ → ಸಿಡುಬು

ಮತ್ತು

ಅದರ ಚಿಕಿತ್ಸೆ

ಸಿಡುಬು ರೋಗ ಈ ಸಂದರ್ಭ ಹರಡಿದೆ. ದಿಲ್ಲಿಯ ಸ್ವಾಸ್ಥ್ಯಾಧಿಕಾರಿಗಳು ದಿಕ್ಕುಗಾಣದಂತಾಗಿರುವರು. ಹೆಚ್ಚು ಕಡಿಮೆ ಇದು ಸರ್ವತ್ರ ಹರಡಿದೆ. ಆಯುರ್ವೇದ ಶಾಸ್ತ್ರಾನುಸಾರ ಇದು ಜನಪದ ಧ್ವಂಸೀಯ ರೋಗಗಳಲ್ಲಿ ಕೂಡಿದ್ದು ಸುಮಾರು 1500ವರ್ಷಗಳ ಹಿಂದೆ ಈ ರೋಗದ ಸಾಂಕ್ರಾಮಿಕತೆ ಇಷ್ಟು ಭಯಾನಕವಾಗಿರಲಿಲ್ಲ. ಈ ರೋಗದ ವರ್ಣನೆಯು ಸುಶ್ರುತದಲ್ಲಿ "ಕ್ಷುದ್ರ ರೋಗ"ಗಳಲ್ಲಿ ಹಾಗೂ "ಚರಕ"ದಲ್ಲಿ ಶ್ವಯಥು ರೋಗಗಳಲ್ಲಿ ಹೇಳಲ್ಪಟ್ಟದೆ. ಈ ರೋಗವು ಆಯುಷ್ಯದ ಯಾವ ಕಾಲದಲ್ಲಿಯೂ ಉಂಟಾಗುತ್ತದೆ. ಹೆಚ್ಚಾಗಿ ಬಾಲ್ಯಾವಸ್ಥೆಯಲ್ಲಿ ಅಧಿಕ. ಈ ಪ್ರಕಾರ ಈ ರೋಗ ವರ್ಷವಿಡೀ ಯಾವಾಗಲೂ ಉಂಟಾಗುತ್ತದೆ. ಆದರೆ ಫಾಲ್ಗುಣ ಚೈತ್ರ (ಚಾಲು ಸಮಯ—ವಸಂತಋತು) ಈ ಕಡೆ ಚೈತ್ರ ವೈಶಾಖ ವಸಂತಋತುವೆಂದಿದ್ದರೂ ಈ ಕಡೆ ಅಮಾವಾಸ್ಯೆಯ ಮರುದಿನದ ಪ್ರತಿಪದೆಯಿಂದ ತಿಂಗಳಾರಂಭವಾಗುವುದಾದರೆ; ಉತ್ತರದವರು ಹುಣ್ಣಿಮೆಯ ಮರುದಿವಸದ ಪ್ರತಿಪದೆಯನ್ನು ಆರಂಭಿಸುವರು. ಹೀಗಾಗಿ ನಮಗೂ ಅವರಿಗೂ ಮಾಸದಲ್ಲಿ ಮಾತ್ರ ಒಂದು ಮಾಸವು ಹೆಚ್ಚು ಕಡಿಮೆ ಲೆಕ್ಕಕ್ಕೆ ಹಿಡಿಯಬೇಕಾಗಿದೆ. ಸಂ|) ಅಧಿಕವಾಗುವುದರಿಂದ ಸಿಡುಬು ರೋಗಕ್ಕೆ "ವಸಂತ ರೋಗ"ವೆನ್ನುತ್ತಾರೆ.

ಇದರ ಪ್ರಸಾರದ ಕಾರಣಗಳು—

ಜನತೆಯ ಸ್ವಾಸ್ಥ್ಯ ರಕ್ಷಣೆಗಾಗಿ ನಮ್ಮ ಸರಕಾರವು ಬರೇ ಧನವ್ಯಯ ಮಾಡಹತ್ತಿದೆ. ಹಿಂದಿನಗಿಂತ ರೋಗವು ಕಡಿಮೆಯಾಗಿದೆ ಆದರೆ ಈಗ ಹೆಚ್ಚಿನ ಮಕ್ಕಳು ಸಾಯುತ್ತಲಿರುವರು. ಹೆಚ್ಚಿನ ಮಕ್ಕಳನ್ನು ರಕ್ಷಿಸಿದರೂ ಕುರುಡರಾಗಿಯೋ, ಮೂಕರಾಗಿಯೋ ಬಳಲುತ್ತಲಿರುವರು.

1) ಧರ್ಮ ಮತ್ತು ದೇವರನ್ನು ಮರೆತು ಭೌತಿಕ ಜೀವನಕ್ಕೆ ಮರಿ ಹೊಕ್ಕಿದ್ದರಿಂದ;

2) [illegible]

3) [illegible] ಅಕಾಲ ಮತ್ತು [illegible] ಹಾಗೂ ವಿಲಾಸತೆಗಳಿಂದಾಗಿ [illegible]

4) ವೈದಿಕ ಮಾರ್ಗದ [illegible];

ಮೇಲೆ ಹೇಳಿದ [illegible] ವಾಗಿ ಅನ್ವಯಿಸುವುದು. [illegible] ಹಾಗೂ [illegible] ರೋಗ ಸಾಂಕ್ರಾಮಿಕವಾಗಿದೆ.

ಈ ಸಮಯದ ಭಯಾನಕತೆ—

ಫಾಲ್ಗುಣದ ಪೂರ್ವ ಹೇಮಂತಋತು ಕಾಲದಲ್ಲಿ ಕಫ ಸಂಚಯವಾಗುತ್ತದೆ. ಈ ಕಫವನ್ನು ವಸಂತಋತುವಿನಲ್ಲಿ ವಮನ ವಿರೇಚನಗಳ ಮುಖೇನ ತೆಗೆಯದಿದ್ದಲ್ಲಿ ವಸಂತಋತುವಿನಲ್ಲಿ (ಸುಶ್ರುತಾನುಸಾರ) ಹಿಂದಿನ ಕಫವು ಕುಪಿತವಾದುದರ ಕಾರಣ ಈ ರೋಗವು ಭಯಂಕರವಾಗುತ್ತದೆ.

ಇದರ ಬೇರೆ ಹೆಸರು—

ಈ ವಸಂತ ರೋಗಕ್ಕೆ—ಸಿಡುಬು, ದೊಡ್ಡ ತಾಯಿ, ಶೀತಲಾ, ಮಸೂರಿಕಾ, ಮಾರಿ ಎಂದು ಕರೆಯುತ್ತಾರೆ.

ಆಯು—

ಈ ರೋಗವು ಪ್ರತ್ಯೇಕ ಆಯುವಿನಲ್ಲಿ ಉಂಟಾಗುತ್ತದೆ. ಆದರೆ ಬಾಲ್ಯಾವಸ್ಥೆಯಲ್ಲಿ ವಿಶೇಷ ರೂಪವಾಗಿ ಉಂಟಾಗುತ್ತದೆ. ಮತ್ತು ಇದು ಬಾಲ್ಯಾವಸ್ಥೆಯಲ್ಲಿ ಮೃತ್ಯುಸ್ವರೂಪವಾಗಿಯೂ ಇದೆ.

ಕಾಲ—

ಈ ರೋಗವು ಯಾವ ಕಾಲದಲ್ಲಿಯೂ ಉಂಟಾಗುತ್ತದೆ. ಆದರೆ ವಸಂತ ಋತುವಿನಲ್ಲಿ ವಿಶೇಷ ರೂಪ ತಾಳುತ್ತದೆ. ಪ್ರಾಯಃಶಃ ಇದೇ ಸಮಯ ಈ ರೋಗದ ಸಂಕ್ರಮಣ ಉಂಟಾಗುತ್ತದೆ.

ಕಾರಣ—

ದೇಶವ್ಯಾಪೀ ವಾತಾವರಣ ದೂಷಿತವಾಗುವುದರಿಂದ, ವಾತಾದಿ ದೋಷಗಳು ಕುಪಿತವಾಗುವುದರಿಂದ ರಕ್ತವು ದೂಷಿತವಾಗಿ ಈ ರೋಗವು ಹೆಚ್ಚುತ್ತದೆ. ಈ ಸಮಯದಲ್ಲಿ ಭಯಂಕರವಾಗುತ್ತದೆ. 12 ದಿವಸಗಳು ರೋಗ ಶಮನವಾಗುವುದಕ್ಕೆ ಹತ್ತುತ್ತದೆ. ಮೂರು ವಾರಗಳಲ್ಲಿ ರೋಗಿ ಆರೋಗ್ಯವಂತನಾಗುತ್ತಾನೆ.

ಭಯಂಕರತೆ—

ಈ ರೋಗದಲ್ಲಿ ಯಾವಾಗಲೂ ಭಯಂಕರ ನಿಮೋನಿಯಾ (ಶ್ವಸನಕ ಜ್ವರ) ಉಂಟಾಗುತ್ತದೆ. ಆದರಿಂದ ಪಾರುಮಾಡಿದ ನಂತರ ಲಾಕ್ಷಣಿಕ ಚಿಕಿತ್ಸೆ ಮಾಡಿರಿ. ಯಾವಾಗಲಾದರೂ ಹೃದಯಾವಸಾದದಿಂದ ಕಷ್ಟವಾಗಿ ಮೃತ್ಯು ಉಂಟಾಗುತ್ತದೆ.

ರೋಗದ ನಂತರ—

ಸಿಡುಬಿನಲ್ಲಿ [illegible], [illegible], [illegible], [illegible] ಭಾಗ (ವಾತರೋಗ) [illegible] ಕಾಣಿಸಿಕೊಳ್ಳುತ್ತವೆ.

ಸಂಕ್ರಮಣಕಾಲ—

[illegible] 6ರಿಂದ 12ನೆ [illegible] ಸಂಕ್ರಮಣ ಕಾಲ

ಚಿಕಿತ್ಸೆ—

ಈ ರೋಗದ ಚಿಕಿತ್ಸೆಯನ್ನು [illegible] ಕೊಡಲಾಗುತ್ತದೆ. ಚಿಕಿತ್ಸಕ [illegible] ಗಳ ಲಕ್ಷಣ ಬೇರೆ ಬೇರೆ ಇರುವುದರಿಂದ ಚಿಕಿತ್ಸೆ [illegible]. ಈ ವಿವಿಧತೆಯನ್ನು [illegible]. ಆದರಿಂದ ಸಾಮಾನ್ಯ ನಿರ್ದೇಶನವನ್ನು [illegible]. ಚಿಕಿತ್ಸೆ [illegible]. ಒಂದು ರೋಗ ಸ್ಪರ್ಶವನ್ನು [illegible]. ಇದಕ್ಕೆ ಪ್ರತಿಬಂಧಕ ಚಿಕಿತ್ಸೆಯೆನ್ನುತ್ತಾರೆ. [illegible] ಚಿಕಿತ್ಸೆಯಾಗಿದೆ.

ಪ್ರತಿಬಂಧಕ ಚಿಕಿತ್ಸಾ—

ವರ್ತಮಾನ ಕಾಲದಲ್ಲಿ ಪ್ರತಿಬಂಧಕ ಚಿಕಿತ್ಸೆಯು [illegible] ಸರಕಾರ ದ್ವಾರಾ ಧರ್ಮಾರ್ಥವಾಗಿ ಎಲ್ಲಾ ಸ್ಥಳಗಳಲ್ಲಿ [illegible]. ಇದರಿಂದ ರೋಗವು ಉಂಟಾಗುವುದಿಲ್ಲವೆನ್ನುತ್ತಾರೆ. [illegible] ಕಾರಣ ಈ ರೋಗವು ಉಂಟಾಗುವುದಿಲ್ಲ. [illegible] ವೆನ್ನುತ್ತಾರೆ. ಅವರ ಜೀವನದಲ್ಲಿ [illegible] ಈ ರೋಗ [illegible] ಇಮ್ಯೂನಿಟಿ ಉಂಟಾಗುತ್ತದೆ. [illegible] ಈ ರೋಗ [illegible] ಹೇಳುತ್ತಿದ್ದರೂ ಚಿಕಿತ್ಸಾ ಶಾಸ್ತ್ರಗಳು ಮಾತ್ರ ಇದನ್ನು ಒಪ್ಪುವುದಿಲ್ಲ. [illegible] ರಿಗೆ ದಾಕು ಹಾಕದಿದ್ದರೂ ಸಿಡುಬು ಉಂಟಾಗಿಲ್ಲ. ಮತ್ತು ದಾಕು ಹಾಕಿದವರಿಗೆ ಸಿಡುಬು ರೋಗದಿಂದಲೇ ಮೃತ್ಯು ಉಂಟಾಗಿದೆ. [illegible] ಮಾತ್ರ ಆರೋಗ್ಯ ರಕ್ಷಣೆಯ ಕುರಿತು—ಸ್ವಾಸ್ಥ್ಯ ರಕ್ಷಣೆಯ ಕುರಿತು ಆಯುರ್ವೇದದ ಉಪಯೋಗ, ಪ್ರಚಾರ ಮಾಡಿದಲ್ಲಿ ಅದರಿಂದ ಅಧಿಕ ಲಾಭವಾಗುವುದು ಸತ್ಯ. ಇದು ಇಷ್ಟರ ವರೆಗೆ ಆಗಿದೆ. ಇದಕ್ಕಾಗಿ ಜನತೆಯಲ್ಲಿ [illegible], [illegible]

ಗಳ ಉಪದೇಶಗಳನ್ನು ಪ್ರಕಟಿಸುವುದು. ಭಾಷಣ, ಫಿಲ್ಮಗಳ ಮುಖೇನ ಪ್ರಸಾರಣ ಮಾಡಬೇಕು. ಆಹಾರ, ವಿಹಾರ, ವಿರೇಚನಗಳ ಕುರಿತು ತಿಳುವಳಿಕೆಯನ್ನು ಕೊಡಬೇಕು. ಆಯುರ್ವೇದದ ಮೂಲ ಉದ್ದೇಶವೇ ಎಲ್ಲರನ್ನೂ ಆರೋಗ್ಯವಂತರನ್ನಾಗಿಡುವುದು. ಆದುದರಿಂದ ಕೃತ್ರಿಮ ರೋಗಕ್ಷಮತೆಯ ಅಪೇಕ್ಷೆಯು ಅಧಿಕ ಲಾಭ–ಅಲ್ಪ ಸಮಯದ ರುಚಿಗೆ ಅನುಕೂಲವಾಗಿದೆ. ರಾಜ್ಯಗಳ ಮುಖೇನ ಆಯುರ್ವೇದಕ್ಕೆ ಪ್ರೋತ್ಸಾಹನ ಕೊಡುವುದರಿಂದ ಅನುಕೂಲವಾಗುವುದು.

2) ಎಲ್ಲಿಯ ವರೇಗೆ ಯೋಗ್ಯ ವಾತಾವರಣ ಉಂಟಾಗುವುದೋ ಅಲ್ಲಿಯ ವರೆಗೆ ಮಾಘ, ಫಾಲ್ಗುಣ ಮಾಸಗಳಲ್ಲಿ ಯಾರಾದರೂ ಯೋಗ್ಯ ವೈದ್ಯರಿಂದ ಪರಾಮರ್ಷೆಗೊಳಿಸಿ ವಮನ, ವಿರೇಚನ ಮಾಡಿಸಿದಲ್ಲಿ ಸಿಡುಬು ರೋಗದ ಭಯವು ಉಂಟಾದಲ್ಲಿ ಬೇವುಸೊಪ್ಪಿನ ಚಿಗುರು ಯಾ ಚಕ್ಕೆಯ ಸ್ವರಸ ಅಥವಾ ರುದ್ರಾಕ್ಷಿಯನ್ನು ತೇದು ಕೊಡುವುದು.

3) ನಿತ್ಯ ಯಜ್ಞಗಳನ್ನು ಮಾಡಿರಿ. ಯಜ್ಞಧೂಮ(ಹೊಗೆ)ಯಿಂದ ಕೀಟಾಣುಗಳು ನಷ್ಟವಾಗುವುವು.

4) ಸಾರ್ವಜನಿಕ ಸ್ಥಳಗಳಿಗೆ ತಾವು ಹೋಗಬೇಡಿರಿ. ಯಾ ಮಕ್ಕಳನ್ನು ಕಳುಹಿಸಬೇಡಿರಿ.

5) ದಾಕಿನ ಸಮಾನ ಔಷಧಿ: —

ನಿಮ್ಮ ಔಷಧಿಗಳನ್ನು ಒಂದು ವಾರ ಪ್ರಯೋಗ ಮಾಡುವುದರಿಂದ ರೋಗಕ್ಷಮತೆ (ಇಮ್ಯೂನಿಟಿ) ಉಂಟಾಗುವುದು.

ಕ) ದೊಡ್ಡ ರುದ್ರಾಕ್ಷಿಯನ್ನು ನೀರಲ್ಲಿ ತೇದು ಒಂದು ವಾರ ಪ್ರತಿ ದಿನ ಕೊಡಿರಿ.

ಖ) ರುದ್ರಾಕ್ಷಿ ಚೂರ್ಣ ೧ಮಾಶ, ಕರಿಮೆಣಸಿನ ಚೂರ್ಣ ೧ಮಾಶ, 7ದಿನಗಳ ತನಕ ಹಳೇ ನೀರಲ್ಲಿ (ಹಿಂದಿನ ದಿನದ ನೀರು) ಕೊಡುವುದು.

ಗ) ವನಕದಳಿ(ಕಾಡು ಬಾಳೆಹಣ್ಣು)ಯ ಬೀಜ ೩ರ ಚೂರ್ಣವನ್ನು ಹಾಲಲ್ಲಿ ಒಂದು ವಾರದ ವರೇಗೆ ಪ್ರತಿದಿನ ಕೊಡುವುದರಿಂದ ಗುಣ.

ಘ) ಪ್ರಸವದ ನಂತರ ಆಗುವ ನಾಲ (ಹೊಕ್ಕುಳ ದಂಟು) ಛೇದನದ ನಂತರ ಅಕ್ಕಿ ಕಾಳು ತೂಕದಷ್ಟು ಕಸ್ತೂರಿಯನ್ನು ಇಡುವುದರಿಂದ ಈ ರೋಗ ಉಂಟಾಗುವುದಿಲ್ಲ.

6) ವರ್ತಮಾನಪತ್ರಿಕೆಯಲ್ಲಿ ಇಲ್ಲವೆ [illegible] ಸರಕಾರವು ಈ ರೋಗದ ದಾಳಿಯನ್ನು ಘೋಷಿಸಿದ್ದರೂ [illegible]. ಇದಕ್ಕಾಗಿ ಆರೋಗ್ಯಾಧಿಕಾರಿಯ ಕಾರ್ಯಾಲಯಕ್ಕೆ ಸ್ವತಃ ತಿಳಿಸಬೇಕು. ಅವರ ಕಾರ್ಯಾಲಯಕ್ಕೆ ಸೂಚನೆ ಕೊಡುವುದರಿಂದ ಈ ರೋಗಕ್ಕಾಗಿ [illegible] ತಮ್ಮಲ್ಲಿಗೆ ಬರಬಹುದು. ಹಾಗೆ ಎಲ್ಲಾ ಕಡೆಗೂ [illegible]. ಆದರೂ ನಿಮ್ಮ ಮನೆಯಲ್ಲಿ ಯಾ ಸಮೀಪದಲ್ಲಿ ರೋಗಿಯಿದ್ದಲ್ಲಿ ಈ ಕಾರ್ಯವನ್ನು ಮಾಡಿರಿ. ಇವು ಪ್ರತಿಬಂಧಕ ಉಪಾಯಗಳಾಗುವುವು.

೧) ರೋಗಿಯನ್ನು ಯಾವುದಾದರೂ ಸರಕಾರಿ ಚಿಕಿತ್ಸಾಲಯದಲ್ಲಿ ಹಾಕಿ ಲ್ಲಾದಿರಿ ಯಾ ಬೇರೆಯಾಗಿರುವ ಕೋಣೆಯೊಂದರಲ್ಲಿ ಇಡಿರಿ. ಆ ಕೋಣೆಯಲ್ಲಿ ಗಾಳಿ, ಬೆಳಕು ಚೆನ್ನಾಗಿ ಬಂದು ರೋಗಿಗೆ ಹಿತಕರವಾಗಿರಬೇಕು.

೨) ರೋಗಿಯ ಸೂಚನೆಯನ್ನು ಜಿಲ್ಲಾ ಕಚೇರಿಗೆ ಕೊಡಿರಿ.

೩) ರೋಗಿಯಿಂದ ಆರೋಗ್ಯವಂತರನ್ನು ದೂರವಿರುವಂತೆ ಮಾಡಿರಿ.

೪) ರೋಗಿಯ ಪರಿಚಾರಕ [illegible] ಯುಕ್ತರಾಗಿರಲಿ.

೫) ರೋಗಿಯ ಸ್ಥಾನವನ್ನು ಯಾವಾಗಲೂ ಸ್ವಚ್ಛಗೊಳಿಸಿರಿ. ಶುದ್ಧವಾಗಿಡಿರಿ. ಅಂಧಕಾರ, ದುರ್ವಾಸನಾಯುಕ್ತ ಸ್ಥಾನಗಳನ್ನು ತುಂಬಿಸಿಡಬೇಡಿರಿ. ಗಾಳಿ ಬೆಳಕು ಚೆನ್ನಾಗಿರುವಲ್ಲಿ ಇಡಿರಿ.

೬) ನಿಮ್ಮ ಸಾಮಗ್ರಿಗಳಿಂದ ಯಜ್ಞವನ್ನು ಮಾಡಿರಿ.

೭) ಯಾರಿಂದ ಮೇಲೆ ಹೇಳಿದ ಯಜ್ಞ ಮಾಡಲಾಗದಿದ್ದರೆ ಅವರು ಲೋಬಾನ, ಗುಗ್ಗುಳ, ಗಂಧಕಗಳ ಧೂಪ ಅವಶ್ಯವಾಗಿ ಕೊಡಲಿ.

೮) ರೋಗಿಯ ಬಟ್ಟೆಯನ್ನು ಹೊರಗೆ ಹಾಕಬೇಡಿರಿ. ಇದರಿಂದ ಸಾಂಕ್ರಾಮಿಕ ಪಸರಿಸುವುದು. ಸ್ವಯಂ ಬಿಸಿ ನೀರಲ್ಲಿ ಕುದಿಸಿರಿ. ರೋಗಿ ಬಟ್ಟೆಗಳನ್ನು ಬದಲಿಸುತ್ತಲಿದ್ದು ಸ್ವಚ್ಛವಾಗಿಡಿರಿ.

೯) ರೋಗಿಯು ಆರೋಗ್ಯವಂತನಾಗುವ ತನಕ ಕೋಣೆಯಿಂದ ಹೊರ ಬಿಡಬೇಡಿರಿ.

೧೦) ರೋಗಿಯ ಹತ್ತಿರ ನೀರಿನ ಮಡಕೆ ತುಂಬಿ ತಂಪಾಗಿಡುವುದರಿಂದ ಪಿತ್ತ ಶಾಂತಿಯಾಗುವುದು.

೧೧) ರೋಗ ಶಾಂತವಾದ ಬಳಿಕ ರೋಗಿಯ ಕೋಣೆಯನ್ನು [illegible] ದ್ರವ್ಯಗಳಿಂದ ಸ್ವಚ್ಛಗೊಳಿಸಬೇಕು.

ರೋಗೋಪಶಾಮಕ ಚಿಕಿತ್ಸಾ

1) ಮೇಲೆ ಹೇಳಿದ ಪ್ರತಿಬಂಧಕ ಉಪಾಯಗಳನ್ನು ಅಗತ್ಯ ಮಾಡಿರಿ.

2) ರೋಗಿಯ ಕೋಣೆಯ ಬಾಗಿಲುಗಳಲ್ಲಿ ಬೇವಿನ ಎಲೆಗಳು ಮತ್ತು ಕೆಂಪು ಬಟ್ಟೆಯನ್ನು ತೂಗ ಹಾಕಿರಿ. ಇದರಿಂದ ಪ್ರಕಾಶವು ಹಾದು ಬರುವುದು ಬೇವು ಕೀಟಾಣು ನಾಶಕವಿದ್ದುದರಿಂದ ಲಾಭದಾಯಕವಿದೆ. ಈ ರೋಗವು ದೇವತೆಯ ಪ್ರಕೋಪದಿಂದುಟಾಗುವುದೆಂದು ಈ ದೇಶದಲ್ಲಿ ನಂಬಿಕೆಯಿದೆ. ಅಂತೂ ಇದಕ್ಕೆ ಚಿಕಿತ್ಸೆ ಅಗತ್ಯ ಸರಕಾರವು ಆರೋಗ್ಯ ರಕ್ಷಣೆಯ ಬಗ್ಗೆ ಆಯುರ್ವೇದದ ಉಪಯುಕ್ತತೆಯನ್ನು ಎಂದಿನ ವರೇಗೆ ಪಡೆಯುವುದಿಲ್ಲವೋ ಅಂದಿನ ವರೇಗೆ ಆಯುರ್ವೇದಾನುರಾಗಿಗಳು ಈ ಪ್ರಚಾರವನ್ನು ಮಾಡಬೇಕು.

3) ರೋಗಿಯ ಕೂಡ ಮಲೀನ ಯಾ ಆರೋಗ್ಯ ವ್ಯಕ್ತಿಗಳನ್ನು ಹೋಗಗೊಡಬೇಡಿರಿ.

4) ರೋಗಿಗೆ ಬರೇ ಹಾಲು ಮತ್ತು ಹಣ್ಣುಗಳ ರಸದ ಅನುಪಾನದಲ್ಲಿಡಿರಿ. ವಿನಃ ಅನ್ನ ಉಪ್ಪುಗಳನ್ನು ವರ್ಜ್ಯ ಮಾಡಿದಷ್ಟು ಉತ್ತಮ.

5) ಉಪ್ಪು ಇತ್ಯಾದಿಗಳಿಂದ ಕೀವು ಪಸರಿಸಿ ಸಂಕ್ರಮಣ ಹೆಚ್ಚುತ್ತದೆ.

6) ರೋಗಿಯು ತುರಿಸಿಕೊಳ್ಳದಂತೆ ಪರಿಚಾರಕರು ದಕ್ಷತೆ ವಹಿಸಬೇಕು. ಇಲದಿದ್ದಲ್ಲಿ ರೋಗಿಗೆ ಕಷ್ಟ ಹೆಚ್ಚುವುದು.

7) ರೋಗಿಯನ್ನು ದಿನಕ್ಕೆರಡು ಸಲ ಜಂತುಘ್ನ ದ್ರವ್ಯಗಳಿಂದ ಬಾಯಿ ಮುಕ್ಕಳಿಸಬೇಕು.

8) ಮೂಗು, ಕಣ್ಣು, ಕಿವಿಗಳನ್ನು ಸ್ವಚ್ಛವಾಗಿಡಬೇಕು. ಕಣ್ಣಿಗೆ ಗುಲಾಬಿ ನೀರು, ಆನಂದ ನೇತ್ರಶೂಲ, ಕಿವಿ ಮತ್ತು ಮೂಗಿಗೆ ಬೊರೋಗಿ ಸೆರಿನ್.

9) ಗ್ಲಿಸರಿನ್ ಬತ್ತಿ ಯಾ ಎನಿಮಾದಿಂದ ಮಲಬದ್ಧತೆಯನ್ನು ನಿವಾರಿಸಬೇಕು. ತೀವ್ರ ಜ್ವರದಲ್ಲಿ "ರತ್ನಾಗಿರಿ ರಸ"ವನ್ನು ಧಾನ್ಯಕ ಕಷಾಯದಲ್ಲಿ ಕೊಡಬೇಕು. ತಣ್ಣೀರ ಪಟ್ಟಿಯನ್ನು ಹಣೆಗಿಡಬೇಕು. ಸೋರೆಕಾಯಿಯನ್ನು ತಲೆಗೆ ಹಚ್ಚಬೇಕು. ಹಾಗೂ ಬೇರೆ ಲಾಕ್ಷಣಿಕ ಚಿಕಿತ್ಸೆಯನ್ನು ಮಾಡಿರಿ. ಶ್ವಸಕಜ್ವರ, ಪ್ರಲಾಪ, ಹೃದಯಾವಸಾದಾದಿ ಉಪದ್ರವಗಳು ಹೆಚ್ಚುತ್ತಲಿದ್ದಲ್ಲಿ ಮಹಾಲಕ್ಷ್ಮೀ ವಿಲಾಸ, ಕಸ್ತೂರಿ ಭೈರವ ಆದಿಗಳಿಂದ ಚಿಕಿತ್ಸೆ ಮಾಡಿರಿ.

10) ಸಿಡುಬಿನ ಆರಂಭದಲ್ಲಿ ವಿಶೇಷ ಚಿಕಿತ್ಸೆ:—

ಲಕ್ಷ್ಮೀನಾರಾಯಣ ರಸ, ಪ್ರವಾಳ ಪಿಷ್ಟಿ, ಮಧುರಾಂತಕ ವಟಿ, ಮುಂತಾದ್ದು ಯುಕ್ತ ಸೇವಿಸಿದರೆ ಲಾಭಪ್ರದವಾಗುವುದು. ಹಾಗೂ ಚಿಕಿತ್ಸೆ ಮಾಡುವವರ ನಿರ್ದೇಶಾನುಸಾರ ಚಿಕಿತ್ಸೆಯನ್ನು ಮಾಡಬಹುದು.

11) ಪಿಟಿಕಾಪಾಕ ಕಾಲದಲ್ಲಿ "ಭರಬೇರಿ"(ಹಿಂದಿ)ಯ ಚೂರ್ಣವನ್ನು ತುಪ್ಪದಲ್ಲಿ ಕೊಡುವುದರಿಂದ ಶೀಘ್ರ ಪಾಕವಾಗುವುದು.

12) ನಿಮ್ಮ ಔಷಧಿಗಳ ಕ್ವಾಥವನ್ನು (ಕಷಾಯ)ವನ್ನು ಬೇರೆ ಔಷಧಿಗಳ ಜತೆಗೆ ಕೊಡುವುದರಿಂದಾಗಲಿ ಬರೀ ಈ ಕಷಾಯವನ್ನು ಕೊಡುವುದರಿಂದಲೂ ಲಾಭದಾಯಕವಿದೆ.

ಪಡೋಲ, ನಿಂಬ, ವಾಸಕಗಳ ಕ್ವಾಥದಲ್ಲಿ "ಬಚ್‌ಕುಡಾ"(ಹಿಂದಿ)ಯ ತೊಗಟೆಯನ್ನು 'ಮುಲಹಟಿ'(ಹಿಂದಿ)ಯಲ್ಲಿ ರುದ್ರಾಕ್ಷಿ ಚೂರ್ಣ ಸೇರಿಸಿ ಕುಡಿಸುವುದು.

13) ಕತ್ತೆಯ ಹಾಲು ಇದರಲ್ಲಿ ಲಾಭದಾಯಕವಿದೆ.

14) ಪಿಟಿಕೆಗಳಲ್ಲಿ ಹಚ್ಚಲಿಕ್ಕೆ ಕುಷ್ಠರೋಗದಲ್ಲಿ ಹೇಳಿದ ಲೇಪಗಳು ಲಾಭಪ್ರದವಿವೆ. ಹರಿದ್ರಾ, ದಶಾಂಗಲೇಪ, ಪಂಚತಿಲ ಘೃತ ಲೇಪ, ಶಾಂತಿದಾಯಕವಿವೆ. ಡಾಕ್ಟರರು ಜಿಂಕ್ ಆಕ್ಸಾಯಿಡ್ ಪೌಡರ್ ಉಪಯೋಗಿಸುತ್ತಾರೆ.

15) ಮಸೂರಿಕಾಂತಕ ವಟಿಯನ್ನು ತಿನ್ನಕೊಡುವುದು ಉತ್ತಮವಿದೆ.

16) ಲಿಪಿನಲಾ ಕ್ವಾಥದಿಂದ ಬಾಯಿ ಮುಕ್ಕಳಿಸಬೇಕು.

17) ಗಾಯ ಹಾಗೂ ಕಲೆಗಳ ನಿವಾರಣೆಗೆ—

ಸುಣ್ಣದ ನೀರು ೪ಔನ್ಸ್
ಆಲಿಬ್ ಆಯಿಲ್ (ಇಪ್ಪೆ) 4ಔನ್ಸ್
ಎಸಿಡ್ ಕಾರ್ಬೋಲಿಕ್ ಅರ್ಧ ಡ್ರಾಮ್
ಮುಕಲಿಪಟಾ ಆಯಿಲ್ ಅರ್ಧ ಡ್ರಾಮ್
ಲಿಕ್ವಿಡ್ ಫೈರಾಫನೀಮ್ ೪ಔನ್ಸ್
ಟಿಂ ಓಂಪಿಯಾಯಿ ೧ಔನ್ಸ್

ಇವರ ಮುಲಾಮು ಹಚ್ಚುವುದರಿಂದ ಬಹಳ ಗುಣಕಾರಿಯಾಗಿಯೂ ತಂಪನ್ನು ಉಂಟುಮಾಡುವುದು.

("ಆರ್ಯಮಿತ್ರ" (ಹಿಂದಿ)ಯಿಂದ)

(ಇದರಲ್ಲಿ ಚಿಕಿತ್ಸೆಯ ಕೆಲವಂಶ ಈ ಹಿಂದೆ ಮೈಸೂರಿನ "ವೈದ್ಯಬಂಧು" ವಾರಪತ್ರಿಕೆಯಲ್ಲಿಯೂ, ಕೆಲವಂಶ ವೈದ್ಯ ಕೃ. ಸು. ಭಟ್ಟರ ಸಂಪಾದಕತ್ವದಲ್ಲಿ ನಡೆಯುತಿದ್ದ "ದೀರ್ಘಾಯು" ಮಾಸಪತ್ರಿಕೆಯಲ್ಲಿಯೂ ಬಂದಿದೆ. ಬೆಂಗಳೂರಿನ "ಆರೋಗ್ಯ ದರ್ಪಣ" ವೆಂಬ ಪುಸ್ತಕದಲ್ಲಿ ನೀರುಳ್ಳಿಯು ಕೀಟಾಣುನಾಶಕವಿರುವದೆಂಬುದಾಗಿಯೂ, ಸಾಂಕ್ರಾಮಿಕ ರೋಗವಿದ್ದಲ್ಲಿ ಬರೆ ಹೊಟ್ಟೆಗೆ ನೀರುಳ್ಳಿಯನ್ನು ಹೊಚ್ಚಿ ಕೆಲವು ತುಂಡುಗಳನ್ನು ತಿನ್ನುತ್ತಾ ಬರುವುದರಿಂದ ಯಾವುದೇ ಸಾಂಕ್ರಾಮಿಕ ರೋಗವು ತಟ್ಟಲಾರದೆಂದೂ ಬರೆದಂತೆ ಇದರ ಪ್ರಯೋಗವನ್ನು ಎರಡಾವರ್ತಿ ಪ್ರಯೋಗ ಮಾಡಿ ನೋಡಲಾಗಿದೆ. ಆದರಿಂದ ಗುಣ ಕಂಡಿದೆ.)

ಆಯುರ್ವೇದ ಪರಿಷತ್ತುಗಳು

ಆಗಾಗ ಸಂದರ್ಭ ಸಿಕ್ಕಿದಾಗ ಕರ್ನಾಟಕದಲ್ಲಿ ಆಯುರ್ವೇದ ಪರಿಷತ್ತುಗಳು ಕೂಡುತ್ತವೆ. ಆದರೆ ಈ ಪರಿಷತ್ತುಗಳು ಪ್ರತಿ ವರ್ಷವೂ ನಿಯತ ಕಾಲಗಳಲ್ಲಿ ನಡೆದರೆ ಯೋಗ್ಯವಿರುತ್ತದೆ. ಅಲ್ಲದೇ ಆಯುರ್ವೇದ ಪರಿಷತ್ತಿಗೆ ಹೋದರೆ ಏನು ಪ್ರಯೋಜನವೆಂದು ಜನರು ಕೇಳುತ್ತಾರೆ. ಈ ಪ್ರಶ್ನೆಗಳು ಏಳದ ಹಾಗೆ ಪರಿಷತ್ತುಗಳು ಆಕರ್ಷಕ ರೀತಿಯಲ್ಲಿ ನಡೆಯಬೇಕು. ಕೆಲವು ಆಕರ್ಷಣೆಗಳನ್ನು ಕೆಳಗೆ ಬರೆದಿದೆ:—

1) ಆಯುರ್ವೇದ ವ್ಯಾಪಾರೀ ಸಂಸ್ಥೆಗಳಿಗೆ ಆಕರ್ಷಣೆ:— ಇತ್ತೀಚೆಗೆ ಪರಿಷತ್ತುಗಳಲ್ಲಿ ಆಯುರ್ವೇದ ವ್ಯಾಪಾರಿ ಸಂಸ್ಥೆಗಳು ತಮ್ಮ ಪ್ರದರ್ಶನಗಳನ್ನು ಇಡಲು ನಿರುತ್ಸಾಹಿಗಳಾಗಿರುವುದು ಕಾಣಬಂದಿದೆ. ಇದಕ್ಕೆ ಪರಿಷತ್ತಿನ ಆವರಣದಲ್ಲಿನ ಪ್ರದರ್ಶನ ವಿಭಾಗವು ಆಕರ್ಷಕ ಚಟುವಟಿಕೆಗಳನ್ನು ಹೊಂದಿಲ್ಲದೇ ಇರುವುದೇ ಮುಖ್ಯ ಕಾರಣವಾಗಿದೆ. ಪ್ರದರ್ಶನ ವಿಭಾಗದಲ್ಲಿ ಮ್ಯಾಜಿಕ್ ಲ್ಯಾಂಟರ್ನ ಉಪನ್ಯಾಸಗಳು, ಯೋಗಾಸನ ಪ್ರದರ್ಶನಗಳು, ವ್ಯಾಯಾಮ ಪ್ರದರ್ಶನಗಳು ಇತ್ಯಾದಿಗಳನ್ನು ಏರ್ಪಡಿಸಿ ಆಯುರ್ವೇದ ವೈದ್ಯರಲ್ಲದವರೂ ಸಹಸ್ರಗಟ್ಟಲೆ ಪ್ರದರ್ಶನ ನೋಡಲು ಬರುವಂತೆ ಏರ್ಪಾಡಾಗಬೇಕು. ಅಲ್ಲದೇ ಮನೆಮದ್ದುಗಳ ಶಿಕ್ಷಣ ವಿಭಾಗ, ಸಂಧಿಗ್ಧ ಮೂಲಿಕಾ ಪ್ರದರ್ಶನ ವಿಭಾಗ, ಭಸ್ಮಾದಿ ತಯಾರಿಕಾ ಪ್ರದರ್ಶನ ವಿಭಾಗ, ಜೇನು ಸಾಕುವ ಪ್ರದರ್ಶನ, ಪ್ರಸೂತಿ ಚಿಕಿತ್ಸೆಗಳ ಸಂರಕ್ಷಣಾ ವಿಭಾಗ ಪ್ರದರ್ಶನ ಇತ್ಯಾದಿಗಳನ್ನು ಮಾಡಿ ವೈದ್ಯರುಗಳೂ ಪ್ರದರ್ಶನ ವಿಭಾಗದಲ್ಲಿ ಲಾಭ ಪಡೆಯುವ ವ್ಯವಸ್ಥೆಯನ್ನು ಮಾಡಬೇಕು. ವೈದ್ಯ ವ್ಯಾಪಾರಿಗಳಿಗೆ ತಮ್ಮ ಔಷಧಗಳನ್ನು ಪ್ರಚುರಪಡಿಸಲು ಎಲ್ಲಾ ಸೌಕರ್ಯಗಳನ್ನೂ ಒದಗಿಸಬೇಕು.

2) ಆಯುರ್ವೇದ ಔಷಧ ನಿರ್ಮಾಪಕರಿಗೆ ಆಕರ್ಷಣೆ:— ಔಷಧ ನಿರ್ಮಾಪಕರಿಗೆ ಪ್ರತಿ ದಿನ ಎದುರು ಬರುವ ಸಮಸ್ಯೆಗಳಾವುವು? ಯಾವ ಯಾವ ಮೂಲಿಕೆಗಳನ್ನು ಎಲ್ಲೆಲ್ಲಿಂದ ತರಿಸಬೇಕು? ಲೇಹ್ಯ, ಆಸವ ಮುಂತಾದುವನ್ನು ಮಾಡುವಾಗ ಯಾವ ಯಾವ ಸಮಸ್ಯೆಗಳು ಕಾಣಬರುತ್ತವೆ? ಉದಾಹರಣೆಗೆ ಲೇಹ್ಯ ಬೇಗ ಕೆಡದಿರಲು ಏನು ಮಾಡಬೇಕು? ಇತ್ಯಾದಿಗಳ ಬಗ್ಗೆ ತಜ್ಞರಿಂದ ಪ್ರದರ್ಶನಗಳನ್ನು ಏರ್ಪಡಿಸಬೇಕು. ಅಲ್ಲದೇ ಕಸ್ತೂರಿ, ಕುಂಕುಮ ಕೇಸರಿ ಮುಂತಾದುವುಗಳನ್ನು ಕೊಂಡುಕೊಳ್ಳುವಾಗ ನಕಲಿ ವಸ್ತು ಯಾವುದು? ಅಸಲಿ

ವಸ್ತುಗಳು ಯಾವುದು? ಎಂದು ಕಂಡುಕೊಂಡು; ಅಸಲಿ ವಸ್ತುಗಳನ್ನು ಎಲ್ಲಿಂದ ತರಿಸಬೇಕು? ಇತ್ಯಾದಿಗಳ ಬಗ್ಗೆಯೂ ಪ್ರದರ್ಶನಗಳು ಏರ್ಪಾಡಾಗಬೇಕು.

3) ವೈದ್ಯರುಗಳಿಗೆ ಆಕರ್ಷಣೆ:—ರೋಗಿಗಳನ್ನೇ ಪರಿಷತ್ತಿಗೆ ತಂದು ಅವರ ಚಿಕಿತ್ಸೆ ಏನು? ಅವರ ರೋಗ ಯಾವುದು? ಇತ್ಯಾದಿಗಳ ಬಗ್ಗೆ ಸಂಭಾಷೆ ನಡೆಯಬೇಕು. ಶೀಘ್ರ ಗುಣಕಾರಿ ಔಷಧಗಳನ್ನು ಪ್ರದರ್ಶಿಸಲು ಏರ್ಪಾಡಾಗಬೇಕು. ಪ್ರತಿಯೊಬ್ಬ ವೈದ್ಯರೂ ತಮ್ಮ ತಮ್ಮ ಅನುಭವಗಳನ್ನು ಪರಿಷತ್ತುಗಳಲ್ಲಿ ಪೂರ್ವಭಾವಿಯಾಗಿ ತಿಳಿಸುವ ಏರ್ಪಾಡಾಗಿ ಅವುಗಳ ಮೇಲೆ ಪರಿಷತ್ತುಗಳಲ್ಲಿ ಜಿಜ್ಞಾಸೆಯಾಗಬೇಕು.

4) ವೈದ್ಯ ನೌಕರರುಗಳಿಗೆ:—ವೈದ್ಯ ನೌಕರರುಗಳ ಕುಂದುಕೊರತೆಗಳೇನು? ಎಂಬ ಬಗ್ಗೆ ಯೋಗ್ಯ ಪ್ರದರ್ಶನ ಮತ್ತು ಭಾಷಣಗಳನ್ನು ಏರ್ಪಡಿಸಿ ಅವರ ತೊಂದರೆಗಳು ಸರಕಾರಕ್ಕೆ ತಿಳಿಯುವ ಹಾಗೆ ಸರಕಾರಿ ಅಧಿಕಾರಿಗಳನ್ನೇ ಆ ಸಂದರ್ಭದಲ್ಲಿ ಪರಿಷತ್ತಿಗೆ ಬರಮಾಡಿಕೊಳ್ಳಬೇಕು.

5) ಮನರಂಜನೆ:—ಆಯುರ್ವೇದ ಮತ್ತು ಸಂಗೀತ, ನೃತ್ಯ ಮತ್ತು ವ್ಯಾಯಾಮ ಇತ್ಯಾದಿಗಳ ವಿಚಾರದಲ್ಲಿ ಉಪನ್ಯಾಸಗಳನ್ನು ಆಯುರ್ವೇದ ದೃಷ್ಟಿಯಿಂದ ಇಡಬೇಕಲ್ಲದೇ ಉತ್ತಮ ಧ್ಯೇಯಪೂರ್ಣ ಸಂಗೀತ, ನೃತ್ಯಾದಿಗಳನ್ನು ಏರ್ಪಡಿಸಬೇಕು.

6) ಕಾನೂನು ತೊಂದರೆಗಳ ವಿಚಾರ:—ಆಸವ, ಅರಿಷ್ಟ, ರಿಜಿಸ್ಟ್ರೇಶನ್ ಇತ್ಯಾದಿಗಳ ಬಗ್ಗೆ ಕುಂದುಕೊರತೆಗಳನ್ನು ಸರಕಾರದ ಅಧಿಕಾರಿಗಳು ಪರಿಷತ್ತಿಗೆ ಬಂದು ಮನವರಿಕೆ ಮಾಡಿಕೊಳ್ಳಲು ಏರ್ಪಡಿಸಬೇಕು.

7) ಆಹಾರ ವಿಶ್ರಾಂತಿಗಳ ಆಕರ್ಷಣೆ:—ಬಂದ ವೈದ್ಯರುಗಳಿಗೆ ಹಣದ ಮುಗ್ಗಟ್ಟಿನ ಕಾರಣ ಹೇಳಿ ವೆಜಿಟೆಬಲ್ ಎಣ್ಣೆ ಮುಂತಾದವುಗಳಿಂದ ಆಹಾರ ತಯಾರಿಸಿ ಅದನ್ನು ಒಗ್ಗದವರಿಗೆ ಬಡಿಸುವುದು, ವಿಶ್ರಾಂತಿ ಸ್ಥಳಗಳಲ್ಲಿ ಸ್ನಾನ, ಶೌಚಾದಿಗಳಿಗೆ ಅನುಕೂಲವಿಲ್ಲದಿರುವುದು ಇತ್ಯಾದಿಗಳು ಇರಬಾರದು.

8) ವೈದ್ಯರುಗಳು ಮೂಲಿಕಾನ್ವೇಷಣಕ್ಕೆ ಪರಿಷತ್ತಿನ ಸುತ್ತಮುತ್ತಲ ಪ್ರದೇಶಗಳಿಗೆ ಒಟ್ಟಿಗೆ ಹೋಗಿ ಬರಲು ಏರ್ಪಾಡಾಗಬೇಕು. ಹಾಗೆಯೇ ಪರಿಷತ್ತು ಪ್ರದೇಶದ ಪ್ರಮುಖ ವೈದ್ಯರುಗಳ ದವಾಖಾನೆಗಳು, ಆಸ್ಪತ್ರೆಗಳು, ಔಷಧ ಮಾರಾಟಗಾರರ ಅಂಗಡಿಗಳು ಇತ್ಯಾದಿಗಳನ್ನು ವೈದ್ಯರುಗಳು ಒಟ್ಟಿಗೆ ಹೋಗಿ ನೋಡಲು ಏರ್ಪಾಡುಗಳಾಗಬೇಕು.

9) ಪ್ರದರ್ಶನ ಮತ್ತು ಪರಿಷತ್ತುಗಳಲ್ಲಿ ಭಾಗವಹಿಸಿದ ಸ್ವಯಂಸೇವಕರಿಗೆ ಹಾಗೂ ಪರಿಷತ್ತಿಗೆ ಒಂದಷ್ಟು ಉಪಯೋಗಕರವೆಂದು ಭಾವಿಸಲು ಬೇಕಾದ ಇತರ ಯಾವತ್ತೂ ಏರ್ಪಾಡುಗಳನ್ನು ಮಾಡಬೇಕು.

10) ಆಯುರ್ವೇದ ಪತ್ರಿಕಾ ಪ್ರದರ್ಶನ, ಆಯುರ್ವೇದ ಪುಸ್ತಕ ಪ್ರದರ್ಶನಗಳಿಗೆ ಏರ್ಪಾಡು ಮಾಡಿ ಅವುಗಳಿಗೆ ಪ್ರೋತ್ಸಾಹವನ್ನು ಪರಿಷತ್ತಿನವರು ಮಾಡಬೇಕು.

11) ಸರ್ವ ವಿಧ ವೈದ್ಯರುಗಳ ಪರಿಷತ್ತಿನಲ್ಲಿ ಎಲ್ಲಾ ವಿಧ ವೈದ್ಯರುಗಳಿಗೆ ಹಿತಕರವಾದ ಚಟುವಟಿಕೆಗಳನ್ನು ಮಾಡಬೇಕು. ಇತ್ಯಾದಿ....ಇತ್ಯಾದಿ.

ಏನು ಪ್ರಯೋಜನ....?

ಸಮುದ್ರ ಮಧ್ಯದಲ್ಲಿ ಹಡಗಿನಲ್ಲಿರುವ ಕವಿಯು ಹೀಗೆ ಹೇಳುತ್ತಾನೆ:—

Water, Water everywhere,
No any drop to drink.

ತಾತ್ಪರ್ಯ:—ಹಡಗಿನ ಸುತ್ತಲೂ ಅಪಾರ ಜಲರಾಶಿ ಇದೆ. ಆದರೆ ಕುಡಿಯಲಿಕ್ಕೆ ಒಂದು ತೊಟ್ಟು ನೀರು ಇಲ್ಲ. ಏಕೆಂದರೆ ಉಪ್ಪು ನೀರನ್ನು ಹೇಗೆ ಕುಡಿಯುವುದು?

ನಮ್ಮ ಕರ್ನಾಟಕದಲ್ಲಿ ಅನೇಕ ವೈದ್ಯಕೀಯ ಸಂಸ್ಥೆಗಳಿವೆ. ಆದರೆ ಅಲ್ಲಿಯ ಅನುಭವಗಳು ನಮಗೆ ಕಾಣಬರುತ್ತಿಲ್ಲ. ಆ ಸಂಸ್ಥೆಗಳಲ್ಲಿ ಏನೇನು ಅನುಭವಗಳನ್ನು ಗಳಿಸಿದ್ದಾರೆ ಎಂಬುದನ್ನು ಆಯಾಯಾ ಸಂಸ್ಥೆಗಳು ನಮ್ಮ ಪತ್ರಿಕೆಯ ಮೂಲಕ ಪ್ರಕಟಿಸಿದರೆ ವೈದ್ಯರುಗಳಿಗೆ ಬಹಳ ಲಾಭವಾಗುವುದೆಂದು ನಾವು ನಂಬುತ್ತೇವೆ.



ಕೀಟಾಣು

ಅಮೇರಿಕೆಯ ಟಾಯಿಮ್ಸ್ ಪತ್ರಿಕೆಯ 1959ನೆಯ ಅಂತಿಮ ಚರಣದ ಅಂಕದಲ್ಲಿ ಬೊಸ್ಟನ್ ಶಹರಿನ ಬ್ರಿಗನ್ ಆಸ್ಪತ್ರೆಯಲ್ಲಿ ಆದ ಒಂದು ಸಂಶೋಧನೆಯ ಪರಿಣಾಮವು ಪ್ರಕಟಿಸಲ್ಪಟ್ಟದೆ. ಒಬ್ಬ ರೋಗಿಯ ಹೊಟ್ಟೆ ಆಪರೇಶನ್‌ನನ್ನು ಅಲ್ಲಿಯ ದೊಡ್ಡ ಸರ್ಜನ್‌ರು ಮಾಡುತ್ತಿದ್ದರು. ಮುಖಕ್ಕೆ ಕೀಟಾಣು ರಕ್ಷಕ ಪರದೆ ಹಚ್ಚಲ್ಪಟ್ಟಿತ್ತು. ಕೀಟಾಣು ವಿಜ್ಞಾನಿ ಡಾ| ರಥ್ ಕುಂಸಿನ್‌ರೂ ಕೂಡ ಅಲ್ಲಿ ನಿಂತಿದ್ದರು. ಆಪರೇಶನ್ ಆಗುವ ತನಕ ಕೀಟಾಣುಗಳ ಸಂಖ್ಯೆ ಬಹಳ ಕಡಿಮೆಯಿತ್ತು. ಹೊಟ್ಟೆ ಬಂದುಮಾಡಿ ಹೊಲಿಯುಹತ್ತುವಾಗ ನೋಡಲಾಗಿ ಕೀಟಾಣುಗಳ ಸಂಖ್ಯೆ ಒಂದಕ್ಕೆ ಐದರಷ್ಟು ಹೆಚ್ಚಿತು. 1959ನೇ ಅಕ್ಟೋಬರ್ ತಿಂಗಳ ಮೊದಲ ವಾರ ಕೂಡಿದ ಅಮೇರಿಕೆಯ ಕೊಲೇಜ್ ಆಫ್ ಸರ್ಜನ್ಸರ ಸಭೆಯಲ್ಲಿ ಡಾ| ಕುಂಸಿನರು "ಆಸ್ಪತ್ರೆಯಲ್ಲಿ ಡಾಕ್ಟರ ಶ್ವಾಸ ಮತ್ತು ಮಾತುಗಳಿಂದ ಘಾತಕ ರೋಗಾಣುಗಳು ಎಲ್ಲಾ ದೇಶಗಳಿಗೂ ಹರಡುತ್ತವೆ. ಆದಾಗಿ ಈ ಡಾಕ್ಟರರುಗಳ ಮತ್ತು ಆಸ್ಪತ್ರೆಗಳ ಮೇಲ್ವಿಚಾರವನ್ನು ಮೊದಲು ನೋಡಿಕೊಳ್ಳಬೇಕು" ಎಂದರು.

ತಾ. 25 ಸಪ್ಟಂಬರ್ 1959ರ ಡೈಲಿ ರಿಕಾರ್ಡ್‌ನಲ್ಲಿ ಒಂದು ಪ್ರಸೂತಿ ಗ್ರಹ ರೋಗಾಣು ಪ್ರಸಾರದ ವಿಚಾರ ಬರೆಯಲ್ಪಟ್ಟಿತ್ತು. ಮತ್ತು 24 ಅಕ್ಟೋಬರ್‌ದಲ್ಲಿ ಲಂಡನಿನ ವಿಶೇಷಜ್ಞ ಡಾ| ಎಥ್. ಐವರಿ ಜೋನ್ಸನ್, ಬ್ರಿಟಿಷ್ ಮೆಡಿಕಲ್ ಎಸೋಸಿಯೇಶನ್‌ನ ಸಭೆಯಲ್ಲಿ "ಆಸ್ಪತ್ರೆಗಳಲ್ಲಿ ಯೋಗ್ಯವಾದ ಸ್ವಚ್ಛತೆಯಿಲ್ಲದಿರುವುದರಿಂದ ಜನರಲ್ಲಿ ತಂತಾನೇ ಕೀಟಾಣುಗಳ ಪರಿವರ್ತನೆಗಳಿಂದ ರೋಗಗಳು ಹರಡುತ್ತವೆ" ಎಂದರು.

ರೋಗ ಪ್ರಸಾರಕ ಕೀಟಾಣುಗಳನ್ನು ನಾಶಮಾಡುವ ಸಲ್ಫಾ ಮತ್ತು ಎಂಟಿಬಯೋಟಿಕ್ಸ್ ಔಷಧಿಗಳ ದುಂದುವ್ಯಯದ ಪ್ರಯೋಗದಿಂದಾಗಿ ಕೇವಲ ಸಾಧಾರಣ ಶ್ರೇಣಿಯ ಕೀಟಾಣುಗಳು ನಾಶವಾಗುತ್ತವೆ. ವಿನಃ ಆದರಿಂದ "ಸ್ಟೆಫಿಲೋಕೋಕಸ್" ಕೀಟಾಣುಗಳು ಉತ್ತೇಜಿತವಾಗಿ ಜಬರ್‌ದಸ್ತು ಮಾಡಹತ್ತುವವು.

ಪೀಟರ್‌ಬರೋದ ಡಾ| ಡಿ ಡಬ್ಲ್ಯು ಬ್ರೆಸಿಯವರು "ದಿನದಿಂದ ದಿನ ಹೊಸ ಹೆಸರಲ್ಲಿ ಹಳೆ ಔಷಧಿಗಳು ಹೆಚ್ಚು ಹೆಚ್ಚಿನ ದರಗಳಿಂದ ಕೂಡಿ ಪ್ರಚಲಿತ

ನಾಗುತ್ತಲಿವೆ. ನನ್ನೊಡನೆ ಅನೇಕ ಕಂಪೆನಿಗಳ ಏಜಂಟರುಗಳು. ಈ ಔಷಧಿಗಳ ಸ್ಯಾಂಪಲ್‌ಗಳನ್ನು ಕೊಟ್ಟು, ಆರ್ಡರ್‌ಗಳನ್ನು ಕೇಳುತ್ತಿರುವರು. ಆದರೆ, ಈ ಔಷಧಿಯನ್ನು ಬರುವ ವರ್ಷಕ್ಕೆ ಕೊಂಡು ಇಟ್ಟು ಬಿಡು. ನಾನು ಕೆಲವು ವರ್ಷಗಳಿಂದ ಹೇಳುತ್ತಲಿದ್ದೇನೆ. ಆದರೆ ಬರುವ ವರ್ಷ ಅದು ಹೊಸತಾಗಿ ಬರುತ್ತದೆ. ಮತ್ತು ಅದು ಹಿಂದಿನದಕ್ಕಿಂತ ಒಳ್ಳೆಯ ಪ್ರಭಾವಶಾಲಿಯಾಗಿದೆ ಎನ್ನುವರು" ಎಂದು ಬರೆದಿರುವರು.

(ಮರಾಠಿ "ಆಯುರ್ವೇದ"ದಿಂದ)



ಅನುಭವಿಕ ಪ್ರಯೋಗಗಳು

ಕಡುಲಿಂಬೆ—ಕಹಿಲಿಂಬೆ:—

ಶ್ರೀ ವಿ. ಮೊ ಪತ, ಬಿ. ಎ., ಇವರು ತಾ. 9–4–'62ರ ಪತ್ರದಲ್ಲಿ ಬರೆಯುತ್ತಾ, "ನಾನು 1947ನೆಯ ಇಸವಿಯಿಂದ ಹೊಟ್ಟೆ ಹುಣ್ಣಿನ ಕಾಯಿಲೆಯಿಂದ ನರಳುತ್ತಲಿದ್ದೆ. ಇದಕ್ಕೆ ಎಲ್ಲಾ ರೀತಿಯ ಉಪಚಾರಗಳೂ 12ವರ್ಷ ನಡೆದವು. ಇಂಜೆಕ್ಷನ್ ಆಯಿತು. ಸಾವಿರಾರು ರೂಪಾಯಿ ಖರ್ಚು ಮಾಡಿಯಾಯಿತು. ಆದರೆ ರೋಗ ಮುಕ್ತಿಯಾಗಿಲ್ಲ. ಅದಾಗಿ ಔಷಧಿಯ ಪ್ರಸ್ತಾಪವನ್ನೇ ಬಿಟ್ಟೆ. ಹೊಟ್ಟೆ ನೋವು ಮಾತ್ರ ಚಾಲು ಇತ್ತು. ತಾ. 27–3–1960ರಂದು ಪ್ರಭಾತ ಸಮಯದಲ್ಲಿ ಕಡುಲಿಂಬೆಯ ಎರಡು ಮುಷ್ಟಿ ಸೊಪ್ಪನ್ನು ಅರೆದು ರಸ ತೆಗೆದು ಅದನ್ನು ಮೂಗು ಹಿಡಿದೆಂಬಂತೆ ಹೇಗೋ ಮಾಡಿ ಕುಡಿದೆ. ಅದು ಚಮತ್ಕಾರವೆನಿಸಿತು! ತಾ. 29–3–1962ರಂದು ಬಿಟ್ಟುಹೋದ ಹೊಟ್ಟೆ ನೋವು ಬಿಟ್ಟೇ ಹೋಯಿತು. ಅದ್ಯಪಿ ಹೊಟ್ಟೆನೋವು ಉಂಟಾಗಿಲ್ಲ. ಈ ಕಡುಲಿಂಬೆಯ ಸೇವನೆಯಿಂದ ಜನ್ಮತಃ ಇದ್ದ ಬದ್ಧಕೋಷ್ಠ ವಿಕಾರಗಳೂ ನಷ್ಟವಾದವು. ಹೀಗೆ ಎರಡು ಕಾಯಿಲೆಗಳಿಗೂ ಲಾಭವದವು. ನನಗೆ ಬಹಳ ಸಮಯದಿಂದಿದ್ದ "ಇಸಬು" ಬಾಳೆ ಹಣ್ಣಿನ ಸಿಪ್ಪೆ ತಿಕ್ಕಿದ್ದರಿಂದ ಗುಣವಾಗಿದೆ.

೦೦೦ ೦೦೦ ೦೦೦ ೦೦೦

ಅಸ್ಥಿವ್ರಣಕ್ಕೆ:—1) ಮನುಷ್ಯನ ಎಲುಬನ್ನು ವಸ್ತ್ರಗಾಳಿತ ಚೂರ್ಣ ಮಾಡಿ ಹಾಕುವುದರಿಂದ ಗುಣ. 2) ಹುಲಿಯ ಚರಬಿಯನ್ನು ಹಚ್ಚುವುದು.

ಸರ್ಪ ವಿಷಕ್ಕೆ:—1) ಗರುಡ ಪಕ್ಷಿಯ ಕೊಕ್ಕನ್ನು ನೀರಲ್ಲಿ ಅರೆದು ಕೊಡುವುದು. 2) ಗಾಂಡೂಳ (ಮರಾಠಿ) ಮತ್ತು ಕರಿಮೆಣಸು ನೀರಲ್ಲಿ ಅರೆದು ಕೊಡುವುದು.

ಕಿವಿಯಲ್ಲಿ ಕೀವಾದರೆ:—ಚಿತ್ರಕದ ಬೇರನ್ನು ಎಣ್ಣೆಯಲ್ಲಿ ಕರೆದು, ಆ ಎಣ್ಣೆಯನ್ನು ಕಿವಿಗೆ ಹಾಕುವುದು.

ವ್ರಣರೋಪಣಕ್ಕೆ:—ಅರ್ಜುನ ಚಕ್ಕೆಯ ಕಷಾಯದಿಂದ ವ್ರಣವನ್ನು ತೊಳೆಯುವುದು.

ಅರೆತಲೆ ನೋವಿಗೆ:—ಯಾವ ಬದಿ ನೋವಿದೆಯೋ ಅದರ ವಿರುದ್ಧ ಮೂಗಿನ ಸೊಳ್ಳೆಯಲ್ಲಿ ಅಗಸ್ತ್ಯದ ಹೂವಿನ ರಸವನ್ನು ಹಾಕುವುದರಿಂದ ಗುಣ

ದೇವಿ-ಸಿಡುಬು ಬೊಕ್ಕೆಗಳಿಗೆ:—ಹುಲಿಯ ಕೋರೆಹಲ್ಲನ್ನು ಅರೆದು ಕೊಡುವುದು.

ಸಿಡುಬಿನಿಂದ ಕಣ್ಣಿನಲ್ಲಿ ಹೂ ಬಂದರೆ:—ಕತ್ತೆಯ ಹಲ್ಲನ್ನು ನೀರಲ್ಲಿ ತೇದು ಅಂಜನ ಹಾಕಬೇಕು.

ಬೆಂಕಿಯಿಂದ ಸುಟ್ಟಲ್ಲಿ:—ಹಣ್ಣಾಗಿ ಬಿದ್ದ ಮಾವಿನ ಎಲೆಯನ್ನು ಸುಟ್ಟು ಮಾಡಿದ ಬೂದಿಯನ್ನು ಬೆಣ್ಣೆಯಲ್ಲಿ ಯಾ ಎಣ್ಣೆಯಲ್ಲಿ ಕಲಸಿಹಚ್ಚುವುದು.

(ಮುರಾರಿ "ಆಯುರ್ವೇದ" ಶಾಸ್ತ್ರಿಕರಿಂದ)



The Sadvaidyashala Limited.

NANJANGUD :: MYSORE.

ದಕ್ಷಿಣ ಭಾರತದಲ್ಲೆಲ್ಲಾ ಅತೀ ದೊಡ್ಡದಾದ ಮತ್ತು ಪರಿಶುದ್ಧವಾದ

→ ಆಯುರ್ವೇದ ಕಾರ್ಖಾನೆ ←

ಆಯುರ್ವೇದ ವಿದ್ವಾನ್

ಬಿ. ವಿ. ಪಂಡಿತರ ಅತ್ಯಮೂಲ್ಯವಾದ



ಮತ್ತು



ಸುರಭಿ



ಜೀವನಿ



ಓಜೋಲ

ಇತ್ಯಾದಿ ಪೇಟೆಂಟ್ ಔಷಧಗಳೂ

ಇತರ ಆಯುರ್ವೇದ ಔಷಧಗಳೂ ಯಶಸ್ಸನ್ನೂ ಕೀರ್ತಿಯನ್ನೂ

ಪಡೆದು ಜನರ ಮೆಚ್ಚಿಗೆಗೆ ಪಾತ್ರವಾಗಿವೆ.

ಪ್ರತೀ ಮನೆಯಲ್ಲೂ ಪ್ರತಿನಿತ್ಯ ಉಪಯೋಗಕ್ಕೆ ಬೇಕಾದ

ನಂಜನಗೂಡು ಟೂತಪೌಡರನ್ನು ಸದಾ ಉಪಯೋಗಿಸಿರಿ

ದಿ. ಸದ್ವೈದ್ಯಶಾಲಾ ಲಿಮಿಟೆಡ್,

ನಂಜನಗೂಡು :: ಮೈಸೂರು

ಡಿಪೋಗಳು:- ಮಂಗಳೂರು, ಬೆಂಗಳೂರು, ಮೈಸೂರು. ಹುಬ್ಬಳ್ಳಿ.

Printed by *T. Devadas Pai* at Bharat Press, Kalsank-Udipi-2
Edited & Published by K. R. Puranik at the Ayurveda
Karyalaya, Udipi